ಮೊದಲ ಸಂಭ್ರಮೋತ್ಸವಕ್ಕೆ ನಿಮ್ಮ ಅನಿಸಿಕೆ ಆಶೀರ್ವಾದ ಇರಲಿ

ಆತ್ಮೀಯ ಓದುಗರೆ, ಬರಹಗಾರರೇ, ಜಾಹೀರಾತುದಾರರೇ ಹಾಗೂ ಪತ್ರಿಕೆಯ ಹಿತೈಷಿಗಳೇ,

21 ಜೂನ್ 2024ಕ್ಕೆ ಹಂಪಿ ಟೈಮ್ಸ್ ಕನ್ನಡ ದಿನಪತ್ರಿಕೆ ಮೊಲದ ವಸಂಥದ ಸಂಭ್ರಮ. ನಿಮ್ಮೆಲ್ಲರ ಸಹಕಾರದಿಂದ ಅಂದು ವಿಶೇಷ ಸಂಚಿಕೆ ಹೊರಬರಲಿದೆ. ಹಂಪಿ ಟೈಮ್ಸ್ ಪತ್ರಿಕೆ ಕುರಿತು ಚುಟುಕು, ಕವನ, ಅನಿಸಿಕೆಗಳನ್ನು ಸ್ವೀಕರಿಸಲಾಗುವುದು.
ಹಂಪಿ ಟೈಮ್ಸ್ ಮೊದಲ ಸಂಭ್ರಮೋತ್ಸವ ಶೀರ್ಷಿಕೆಯಡಿ ನಿಮ್ಮ ಅಭಿಪ್ರಾಯಗಳನ್ನು ಕಳಿಸಬಹುದು.
ಅಭಿಪ್ರಾಯದ ಜೊತೆ ನಿಮ್ಮ ಹೆಸರು, ಊರು, ಭಾವಚಿತ್ರ, ಸಂಪರ್ಕ ನಂಬರ್ ಇರಲಿ.

ಸಂಪಾದಕ,
ಹಂಪಿ ಟೈಮ್ಸ್ ವಿಜಯನಗರ ಜಿಲ್ಲೆ
ಮೊ: 9448633038
hampitimes@gmail.com

ಕವಿ ಮನಸು

ಅಂಗಳ

ಶುಭ್ರವಾಗಿತ್ತು ನನ್ನ ಎದೆಯ ಅಂಗಳ
ಅರಳಿಸಿದೆ ನೀನಲ್ಲಿ ಹೊಂಗನಸುಗಳ
ಆಗಿದ್ದೆನು ನಿನ್ನಾಟಕ್ಕೆ ಮೋಸದ ದಾಳ
ಅರಿಯಲಿಲ್ಲ ನೀ ನನ್ನ ಪ್ರೀತಿಯ ಆಳ

ತಂದಲ್ಲಿ ಸುರಿದೆ ನೀ ಬೇಡದ ಕಸಗಳ
ಕೊಳೆತು ನಾರುತ್ತಿದೆ ಮನವು ಬಹಳ
ಕಷ್ಟಪಟ್ಟು ಶುಚಿಗೊಳಿಸಿದೆ ಫಳ ಫಳ
ಮತ್ತೆ ಅಂಗಳದಲ್ಲಿ ಅರಳಿದೆ ಹೂದಳ

ಬದುಕೇ ಕಲಿಸುವ ಪಾಠಗಳೇ ಸರಳ
ನಂಬಿಕಸ್ಥರು ಸಿಗುವುದು ಇಲ್ಲಿ ವಿರಳ
ಜೀವಿಸಿ ತಪ್ಪದಂತೆ ಬಾಳಿನ ರಾಗತಾಳ
ಇರಲಿ ಸೋತರೂ ಸದಾ ಗೆಲ್ಲುವ ಛಲ

– ವಿಜಯಲಕ್ಷ್ಮಿ ನಾಯ್ಕ್
ಬಿಳಿಯೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಪ್ರತಿಭೆಯೇ ಮಕ್ಕಳಿಗೆ ಮುಳುವಾಗುತ್ತಿದೆಯೇ?!

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲರ ನಡುವೆಯೂ ಸ್ಪರ್ಧೆಯೇ!!, ಈ ಸ್ಪರ್ಧೆಯಲ್ಲಿ ಖಾಸಗಿ ವಾಹಿನಿಗಳೂ ಹೊರತಲ್ಲ. ಅನೇಕ ಖಾಸಗಿ ವಾಹಿನಿಗಳು ತಮ್ಮ ಟಿ ಆರ್ ಪಿ ಯನ್ನು ಹೆಚ್ಚಿಸುವ ಜಿದ್ದಿಗೆ ಬಿದ್ದು ವಿವಿಧ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿರುತ್ತಾರೆ ಅದರಲ್ಲಿ ರಿಯಾಲಿಟಿ ಶೋ ಕೂಡ ಒಂದು.

ರಿಯಾಲಿಟಿ ಶೋ ಗಳಲ್ಲಿ ಹಾಡು, ನೃತ್ಯ, ನಾಟಕ, ಹಾಸ್ಯ ಮುಂತಾದ ಅನೇಕ ರಿಯಾಲಿಟಿ ಶೋ ಗಳು ಇರುತ್ತವೆ. ಈ ರಿಯಾಲಿಟಿ ಶೋ ಗಳಲ್ಲಿ ಮಕ್ಕಳೇ ಮುಖ್ಯ ಆಕರ್ಷಣೆ. ತಮ್ಮ ವಾಹಿನಿಯನ್ನು ಅತಿ ಹೆಚ್ಚು ಜನರು ವೀಕ್ಷಿಸಲಿ ಎಂಬ ಕಾರಣಕ್ಕಾಗಿ ಮಕ್ಕಳನ್ನು ಬಳಸಿಕೊಂಡು ಅನೇಕ ವಿಧದ ರಿಯಾಲಿಟಿ ಶೋಗಳನ್ನು ಖಾಸಗಿ ವಾಹಿನಿಗಳು ಪ್ರಸಾರ ಮಾಡುತ್ತಿರುತ್ತವೆ.

ಮಕ್ಕಳ ಪ್ರತಿಭೆಗಳನ್ನು ಜಗತ್ತಿಗೆ ಅನಾವರಣಗೊಳಿಸುತ್ತೇವೆ ಎಂದು ಹಲವು ರಿಯಾಲಿಟಿ ಶೋ ಗಳನ್ನು ಅನೇಕ ಖಾಸಗಿ ವಾಹಿನಿಗಳು ಪ್ರಸಾರ ಮಾಡುತ್ತಿರುವುದನ್ನು ನಾವು ನೋಡಿಕೊಂಡೇ ಬಂದಿದ್ದೇವೆ ಆದರೆ ಇಂತಹ ರಿಯಾಲಿಟಿ ಶೋ ಗಳಿಂದ ಮಕ್ಕಳಿಗೆ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚು.

ರಿಯಾಲಿಟಿ ಶೋ ಎಂದ ಮೇಲೆ ಹೆಚ್ಚಿನ ಸಮಯದ ತಯಾರಿಯೂ ಅಗತ್ಯ. ಬಾಲ ಪ್ರತಿಭೆಗಳು ತಮ್ಮ ಶಾಲಾ ಸಮಯವನ್ನು ರಿಯಾಲಿಟಿ ಶೋ ಗಳ ತಯಾರಿಗಾಗಿ ಬಳಸಬೇಕಾಗುತ್ತದೆ ಅದರ ಜೊತೆಗೆ ರಾಸಾಯನಿಕಯುಕ್ತ ಸೌಂದರ್ಯವರ್ಧಕಗಳು ಎಳೆ ತ್ವಚೆಯ ಆರೋಗ್ಯವನ್ನು ಕೆಡಿಸಿದರೆ, ವಿವಿಧ ವಿನ್ಯಾಸಗಳ ಅಂಗಿಗಳು ಮಕ್ಕಳಿಗೆ ಕಿರಿ ಕಿರಿಯನ್ನುಂಟುಮಾಡಬಹುದು.

ತರಗತಿಯ ಸಮಯವನ್ನು ರಿಯಾಲಿಟಿ ಶೋ ಗಳಿಗಾಗಿ ಮೀಸಲಿಟ್ಟು, ಶೈಕ್ಷಣಿಕ ಪಾಠಗಳಿಂದ ದೂರವುಳಿಯುವ ಇಂತಹ ಮಕ್ಕಳು ಕಲಿಕೆಯಲ್ಲಿ ಇತರ ಮಕ್ಕಳಿಗಿಂತ ಹಿಂದುಳಿಯುವುದು ಸಾಮಾನ್ಯ. ರಿಯಾಲಿಟಿ ಶೋ ಗಳಲ್ಲಿ ಬಾಲ ಪ್ರತಿಭೆಗಳಾಗಿ ಮಿಂಚಿದ ಅದೆಷ್ಟೋ ಮಕ್ಕಳು ದೊಡ್ಡವರಾದ ಮೇಲೆ ಅವಕಾಶ ವಂಚಿತರಾಗಿರುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಇಂತಹ ಬಾಲ ಪ್ರತಿಭೆಗಳಿಗೆ ಇತ್ತ ನಟನೆಯ ಅವಕಾಶವೂ ಇಲ್ಲ ಅತ್ತ ಉದ್ಯೋಗದ ಅವಕಾಶವೂ ಇಲ್ಲ ಎಂಬಂತಾಗುತ್ತದೆ.

ತಮ್ಮ ಮಕ್ಕಳು ಸಣ್ಣ ವಯಸ್ಸಿನಲ್ಲಿಯೇ ಸಂಪಾದನೆ ಹಾಗೂ ಹೆಸರು ಮಾಡಬೇಕೆಂಬ ಮೋಹದಿಂದ ಅನೇಕ ಪೋಷಕರು ಇಂದು ತಮ್ಮ ಮಕ್ಕಳನ್ನು ರಿಯಾಲಿಟಿ ಶೋ ಗಳಿಗೆ ಕಳುಹಿಸುವುದನ್ನು ನಾವು ನೋಡಬಹುದು. ತಮ್ಮ ಮಕ್ಕಳು ಸಭೆ, ಸಮಾರಂಭಗಳಿಗೆ ತೆರಳಿದರೆ ಘಂಟೆಗೆ ಇಷ್ಟಿಷ್ಟು ಹಣ ಪಡೆಯುವಂತೆ ಪೋಷಕರೇ ಒಂದು ಮೊತ್ತವನ್ನು ನಿಗದಿಪಡಿಸಿ ಮಕ್ಕಳಿಗೆ ತಿಳಿಸುವುದು ವಿಪರ್ಯಾಸ!!

ರಿಯಾಲಿಟಿ ಶೋ ಎಂದ ಮೇಲೆ ಸ್ಪರ್ಧೆಗಳು, ಆಯ್ಕೆಗಳು ಸಾಮಾನ್ಯ ಹಾಗಾಗಿ ಸೋಲು, ಗೆಲುವು ಎಂಬುದು ಇದ್ದೇ ಇರುತ್ತದೆ. ಸೋಲು ಹಾಗೂ ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನಸ್ಥಿತಿಯಿರದ ಮಕ್ಕಳು ಗೆದ್ದರೆ ಹೇಗೆ ಅತಿಯಾದ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾರೋ ಹಾಗೆಯೇ ಸೋತರೆಂದರೆ ಅತಿಯಾದ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಯ ದಾರಿಯನ್ನೂ ಹಿಡಿಯಬಹುದು.

ರಿಯಾಲಿಟಿ ಶೋ ಗಳಲ್ಲಿ ಮಕ್ಕಳಿಗೆ ಕೇಳಲಾಗುವ ಕೆಲವೊಂದು ಖಾಸಗಿ ಪ್ರಶ್ನೆಗಳು ಮಕ್ಕಳನ್ನು ತೀರಾ ಮುಜುಗರಕ್ಕೊಳಗಾಗುವಂತೆ ಮಾಡುತ್ತದೆಯಲ್ಲದೇ ಮಕ್ಕಳ ಯೋಚನಾ ದಿಕ್ಕನ್ನೇ ಬದಲಿಸಬಹುದು. ತಮ್ಮ ಹೊಟ್ಟೆಪಾಡಿಗಾಗಿ ಮಕ್ಕಳು ದುಡಿದರೆ ಬಾಲ ಕಾರ್ಮಿಕರು ಎಂದು ಪರಿಗಣಿಸುವುದಾದರೆ ಇಂದು ಅನೇಕ ಖಾಸಗಿ ವಾಹಿನಿಗಳು ಮನರಂಜನೆಯ ನೆಪದಲ್ಲಿ ತಮ್ಮ ಟಿ ಆರ್ ಪಿ ಯನ್ನು ಹೆಚ್ಚಿಸಲೋಸುಗ ಮಕ್ಕಳನ್ನು ದುಡಿಸಿಕೊಳ್ಳುತ್ತಿವೆಯಲ್ಲಾ ಇದಕ್ಕೇನೆಂದು ಹೆಸರಿಡೋಣ?! ಹದಿನಾಲ್ಕು ವಯಸ್ಸಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಮನರಂಜನೆಯ ನೆಪದಲ್ಲಿ ಅನೇಕ ಖಾಸಗಿ ವಾಹಿನಿಗಳು ದುಡಿಸಿಕೊಳ್ಳುವುದು ಮಾತ್ರವಲ್ಲದೇ ಮುಗ್ಧ ಮಕ್ಕಳಿಗೆ ಗೆಲ್ಲಲೇ ಬೇಕೆಂದು ಒತ್ತಡವನ್ನೂ ಹೇರುತ್ತಿವೆ!!,

ಕೆಲವು ಪೋಷಕರೂ ಕೂಡ ಮಕ್ಕಳಿಗೆ ಗೆಲ್ಲಲೇಬೇಕೆಂದು ಒತ್ತಡ ಹೇರುವುದು

ವಿಪರ್ಯಾಸ!!, ಇಂತಹ ಒತ್ತಡಗಳಿಂದ ಮಕ್ಕಳು ಮಾನಸಿಕವಾಗಿ ಕುಗ್ಗಿ, ಆತ್ಮಸ್ಥೈರ್ಯ ಕಳೆದುಕೊಳ್ಳುವಂತಾಗುತ್ತದೆ ಹಾಗೂ ಸೋಲು ಎಂದರೆ ವಿಪರೀತವಾಗಿ ಭಯಗೊಳ್ಳುವಂತಾಗಿ, ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇರದೇ ಆತ್ಮಹತ್ಯೆಯ ಹಾದಿಯನ್ನೂ ಹಿಡಿಯಬಹುದು. ಮನರಂಜನೆಯ ಹೆಸರಿನಲ್ಲಿ ಮುಗ್ಧ ಮಕ್ಕಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ಕೊಡುವುದು ಅಕ್ಷಮ್ಯ ಅಪರಾಧವೇ ಸರಿ.

ಮಕ್ಕಳಿಗೆ ಹೆಚ್ಚಿನ ಆತ್ಮವಿಶ್ವಾಸ, ಧೈರ್ಯ, ಮಾತನಾಡುವ ಕಲೆ ಮುಂತಾದವುಗಳನ್ನು ಮೂಡಿಸಲು ರಿಯಾಲಿಟಿ ಶೋ ಗಳೇ ಆಗಬೇಕೆಂದಿಲ್ಲ ಶಾಲೆಯಲ್ಲಿ ಏರ್ಪಡಿಸುವ ಅನೇಕ ಕಾರ್ಯಕ್ರಮಗಳು ಮಕ್ಕಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಗಟ್ಟಿಗೊಳಿಸಿ, ಮಕ್ಕಳ ಮುಂದಿನ ಭವಿಷ್ಯಕ್ಕೂ ಉತ್ತಮವಾಗಿ ದಾರಿದೀಪವಾಗಬಲ್ಲದು.

ನಿಜವಾದ ಪ್ರತಿಭೆಯುಳ್ಳ ಮಕ್ಕಳು ಮಿಂಚಬೇಕಾದರೆ ದೂರದರ್ಶನದ ಮನರಂಜನಾ ಕಾರ್ಯಕ್ರಮಗಳೇ ಆಗಬೇಕೆಂದಿಲ್ಲ ಆದರೆ ಬಲು ಬೇಗ ಪ್ರಚಾರ ದೊರಕಿ ಪ್ರಸಿದ್ಧಿ ಹೊಂದಬೇಕೆಂಬ ಕಾರಣದಿಂದ ಮಕ್ಕಳ ಇಷ್ಟ, ಕಷ್ಟಗಳನ್ನೂ ಗಮನಿಸದೇ ಒತ್ತಾಯಪೂರ್ವಕವಾಗಿ ಅನೇಕ ಕಲೆಗಳನ್ನು ಕಲಿತು, ವಾಹಿನಿಗಳಲ್ಲಿ ಪ್ರದರ್ಶನ ಕೊಡಬೇಕೆಂದು ಒತ್ತಡ ಹೇರುವುದೂ ತಪ್ಪಲ್ಲವೇ?!

ಇಂತಹ ರಿಯಾಲಿಟಿ ಶೋ ಗಳು ಇನ್ನು ಮುಂದೆಯಾದರೂ ಸ್ಥಗಿತಗೊಳ್ಳುವಂತಾಗಲಿ ಹಾಗೂ ಹೆಚ್ಚಿನ ಪೋಷಕರಿಗೆ ರಿಯಾಲಿಟಿ ಶೋ ಗಳ ಹಿಂದಿನ ರಿಯಾಲಿಟಿ ಯ ಅರಿವು ಮೂಡುವಂತಾಗಲಿ ಎಂಬುದೇ ಈ ಬರಹದ ಮೂಲ ಆಶಯ.

– ಪ್ರಜ್ಞಾ ರವೀಶ್ ಕುಳಮರ್ವ

ಹಮ್ ದೋ ಹಮಾರ ಬಾರ

ಮೊದಲನೆ ಪುಟದಿಂದ

ಇದು ಮುಸ್ಲಿಂ ಸಮುದಾಯವನ್ನೇ ಕೆಣಕುವಂತಿದೆ, ಒಬ್ಬ ಮಹಿಳೆಯ ಬಗ್ಗೆ ಈ ರೀತಿಯ ಕೆಟ್ಟ ಭಾವನೆಗಳನ್ನು ಉಂಟು ಮಾಡಿ ಪ್ರಚೋದನೆಯನ್ನು ನೀಡಬಾರದು.

ನಾವೆಲ್ಲರೂ ಮನುಷ್ಯರು, ಇಲ್ಲಿ ಮನುಷ್ಯತ್ವವೇ ಮುಖ್ಯ, ಮಾನವೀಯತೆ ಮಿಡಿಯದ ಸಿನಿಮಾಗಳು ಖಂಡಿತ ಸಮಾಜದಲ್ಲಿ ಇರಬಾರದು, ಈ ಸಿನಿಮಾವನ್ನು ಕೇವಲ ಅಲ್ಲಾಹುವಿನ ಪವಿತ್ರ ಗ್ರಂಥವಾದ ಖುರಾನ್ ಶರೀಫ ರಲ್ಲಿ ಇರುವ 'ಸೂರೆ–ಎ–ಬಕರ' ಸಾಲಿನಿಂದ ತೆಗೆದುಕೊಂಡು ಇದರ ಪೂರ್ಣ ಸಾಲುಗಳನ್ನು ಅವರು ಗಮನಿಸಿಯೇ ಇಲ್ಲ ಮತ್ತು ಆ ಸೂಕ್ತಿಯನ್ನು ಇವರು ತಪ್ಪಾಗಿ ಅರ್ಥೈಸಿದ್ದಾರೆ, ಈ ಸಿನಿಮಾ ಬಿಡುಗಡೆಯಾದರೇ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಹಾಳಾಗುತ್ತದೆ ಹಾಗೂ ಕೋಮುಗಲಭೆ ಸೃಷ್ಟಿಯಾಗಲು ಕಾರಣವಾಗುತ್ತದೆ. ಈ ಸಿನಿಮಾ ದೇಶಾದ್ಯಂತಹ ಯಾವುದೇ ಕಾರಣಕ್ಕೂ ಬಿಡುಗಡೆಯಾಗಬಾರದು ಮತ್ತು ಈ ಚಿತ್ರದ ನಿರ್ಮಾಪಕರು ಹಾಗೂ ನಿರ್ದೇಶಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಆಫೀಸ್ ಅಬ್ದುಲ್ ಸಮದ್, ಅಂಜುಮನ್ ಕಮಿಟಿಯ ಉಪಾಧ್ಯಕ್ಷ ಎಮ್ ಫಿರೋಜ್ ಖಾನ್, ಕಾರ್ಯದರ್ಶಿ ಎಮ್.ಡಿ. ಅಬೂಬಕ್ಕರ್, ಖಾಜಾಂಚಿ ಜಿ.ಅನ್ಸರ್ ಭಾಷ, ಸಹಕಾರ್ಯದರ್ಶಿ ಡಾ.ಎಮ್.ಡಿ. ದುರ್ವೇಶ್ ಮೈನುದ್ದಿನ್ ಹಾಗು ಸದ್ಯಸರಾದ ಕೋತ್ವಾಲ್ ಮೊಹಮ್ಮದ್ ಮೋಸಿನ್ ಅಡ್ವಕೇಟ್ ಸದ್ದಾಮ್ ಹುಸೇನ್, ಎಲ್. ಗುಲಾಮ್ ಹಾಗೂ ಹಿರಿಯ ಮುಖಂಡರು ಇದ್ದರು.

ಶ್ರೀ ಹುಲಿಗೆಮ್ಮದೇವಿ ಮಹಾರಥೋತ್ಸವ ಅದ್ದೂರಿ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ತಾಲೂಕಿನ ಹುಲಿಗೆ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹಾರಥೋತ್ಸವ ಶುಕ್ರವಾರ ಅಪಾರ ಜನ ಸಾಗರದ ನಡುವೆ ವಿಜೃಂಭಣೆಯಿಂದ ಜರುಗಿತು.

ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಿಯ ಪ್ರಸಕ್ತ ಸಾಲಿನ ಜಾತ್ರಾ ಮಹೋತ್ಸವದ ಅಂಗವಾಗಿ ಮೇ 30ರಿಂದ ಜೂನ್ 3ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಜಾತ್ರೆಯ ಮುಖ್ಯ ಭಾಗವಾದ ಮಹಾರಥೋತ್ಸವವು ಮೇ 31ರ ಸಾಯಂಕಾಲ 5–30 ಗಂಟೆ ಸುಮಾರಿಗೆ ಲಕ್ಷಾಂತರ ಭಕ್ತಾಧಿಗಳ ಸಮೂಹದ ನಡುವೆ ಅದ್ದೂರಿಯಾಗಿ ನಡೆಯಿತು.

ಸುಮಾರು ಐದು ಲಕ್ಷಕ್ಕೂ ಅಧಿಕ ಭಕ್ತಾದಿಗಳು ಭಾಗಿ: ಮಹಾರಥೋತ್ಸವದಲ್ಲಿ ಭಕ್ತರ ಉಧೋ ಉಧೋ ಘೋಷಣೆ ಮುಗಿಲು ಮುಟ್ಟಿತ್ತು. ಭಕ್ತವೃಂದ ರಥಕ್ಕೆ ಬಾಳೆಹಣ್ಣು, ಉತ್ತತ್ತಿ ಸಮರ್ಪಿಸಿ, ಭಕ್ತಿ ಭಾವ ಮೆರೆದರು. ಕರ್ನಾಟಕದ ವಿವಿಧ ಜಿಲ್ಲೆಗಳ ಮತ್ತು ನೆರೆ ರಾಜ್ಯಗಳಿಂದ ಲಕ್ಷಾಂತರ ಭಕ್ತಾದಿಗಳು ಕಣ್ತುಂಬಿಕೊಂಡರು.

ದಡಾರಾ ರುಬೆಲ್ಲಾ ನಿರ್ಮೂಲನೆಗೆ ಸಹಕರಿಸಿ

ಮೊದಲ ಪುಟದಿಂದ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಶಂಕರ್ ನಾಯ್ಕ್. ಎಲ್. ಮಾತನಾಡಿ, ಗ್ರಾಮೀಣ ಭಾಗದ ಕೆಲ ಜನರು ಮೂಢನಂಬಿಕೆಗಳಿಂದ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡುವುದಿಲ್ಲ. ಆರೋಗ್ಯ ಇಲಾಖೆಯ ಯಾವುದೇ ಲಸಿಕೆ ಮತ್ತು ಅದರ ಮಹತ್ವದ ಕುರಿತು ವ್ಯಾಪಕವಾಗಿ ಜನರಿಗೆ ತಿಳಿವಳಿಕೆ ಮೂಡಿಸುವ ಕಾರ್ಯವು ಲಸಿಕಾ ಅಭಿಯಾನದ ಜೊತೆಜೊತೆಗೆ ಸಾಗಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ.ಜಂಬಯ್ಯ ಅವರು ಮಾತನಾಡಿ, ಮಕ್ಕಳಲ್ಲಿ ಜ್ವರ ಮತ್ತು ತದ್ದು ಕಂಡು ಬರುತ್ತಿದ್ದಲ್ಲಿ ಪಾಲಕರು ನಿರ್ಲಕ್ಷ್ಯ ಮಾಡಬಾರದು. ಆರೋಗ್ಯ ಇಲಾಖೆಯ ಗಮನಕ್ಕೆ ತರಬೇಕು. ಜ್ವರ ಮತ್ತು ತದ್ದು ಕಂಡು ಬರುವ ಮಕ್ಕಳೇನಾದರು ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದರೆ ಈ ಬಗ್ಗೆ ಖಾಸಗಿ ಆಸ್ಪತ್ರೆಗಳು ಸರ್ಕಾರಿ ಆಸ್ಪತ್ರೆಗಳಿಗೆ ವರದಿ ಮಾಡಬೇಕು ಎಂದು ತಿಳಿಸಿದರು.

ಎನ್‌ಪಿಎಸ್‌ಪಿ ಸರ್ವೆಲನ್ಸ್ ನೋಡಲ್ ಅಧಿಕಾರಿ ಡಾ.ಶ್ರೀಧರ ಆರ್.ಎಸ್ ಅವರು ಪ್ರಾಸ್ತಾವಿಕ ಮಾತನಾಡಿ, ಸಾಂಕ್ರಾಮಿಕ ವೈರಲ್ ರೋಗಗಳಾದ ದಡಾರ ಮತ್ತು ರುಬೆಲ್ಲಾದಿಂದ ಮಕ್ಕಳನ್ನು ರಕ್ಷಿಸುವ ಹಿನ್ನೆಲೆಯಲ್ಲಿ ಭಾರತ ಸರ್ಕಾರವು 2017ರಲ್ಲಿ ದಡಾರ ಮತ್ತು ರುಬೆಲ್ಲಾ ಲಸಿಕೆ ಅಭಿಯಾನವನ್ನು ಪ್ರಾರಂಭಿಸಿದೆ. ಈ ಅಭಿಯಾನದಡಿ ಮಕ್ಕಳಿಗೆ ಉಚಿತವಾಗಿ ಲಸಿಕೆ ನೀಡಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿ ಡಾ.ಷಣ್ಮುಖ ನಾಯ್ಕ.ಬಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊಡ್ಡಮನಿ ಎಂ.ಪಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಕೆ.ಕಮಲಮ್ಮ, ಜಿಲ್ಲಾ ಕುಷ್ಟರೋಗ ನಿರ್ಮೂಲನಾ ಅಧಿಕಾರಿ ಡಾ. ರಾಧಿಕಾ, ಹೊಸಪೇಟೆ ತಾಲೂಕು ಆರೋಗ್ಯಾಧಿಕಾರಿ ಡಾ. ಭಾಸ್ಕರ್, ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಜಗದೀಶ್ ಪಾಟ್ನೆ ಸೇರಿದಂತೆ ಇತರರು ಇದ್ದರು.

ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ವಿಶ್ವ ನೀರು ನಾಯಿ ದಿನಾಚರಣೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ವಲಯದ ಪ್ರಾದೇಶಿಕ ಅರಣ್ಯ ವಲಯ ಮುನಿರಾಬಾದ್ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ಮುನಿರಾಬಾದ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಮೇ 29 ರಂದು ತೋಟಗಾರಿಕೆ ಮಹಾವಿದ್ಯಾಲಯ, ಮುನಿರಾಬಾದ್‌ನಲ್ಲಿ ವಿಶ್ವ ನೀರುನಾಯಿ ದಿನವನ್ನು ಆಚರಿಸಲಾಯಿತು.
ಕಾರ್ಯಕ್ರಮದಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ. ಮಹೇಶ್ವರಪ್ಪ ಹೆಚ್.ಪಿ, ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ತಮ್ಮಯ್ಯ ಎನ್, ಕೊಪ್ಪಳ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಣ್ಣ ಎ., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಮಾರ್ಕಂಡೇಯ, ಸಾಮಾಜಿಕ ಅರಣ್ಯ ಉಪ–ವಿಭಾಗ ಕೊಪ್ಪಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುಸೇನಬಸಿಯಾ ಪೆಂಡಾರಿ, ತುಂಗಭದ್ರಾ ಡ್ಯಾಂ ವಿಭಾಗ ನಂ–1 ನ ಕಾರ್ಯನಿರ್ವಾಹಕ ಅಭಿಯಂತರರಾದ ಗಿರೀಶ ಸಿ. ಮೇಟಿ, ಕೊಯಮತ್ತೂರ ಖಂಅಔಓ ನ ಅಂಕಿತಮೌನ್, ವಲಯ ಅರಣ್ಯಾಧಿಕಾರಿ ಪ್ರಕಾಶ ಎಸ್.ಪವಾಡಿಗೌಡರ್, ಸುಭಾಷ್‌ಚಂದ್ರ, ರಿಯಾಜ್, ಉಪವಲಯ ಅರಣ್ಯಾಧಿಕಾರಿ ಸುನೀಲ್‌ಕುಮಾರ, ದೊಡ್ಡಪ್ಪ, ಗಸ್ತುಪಾಲಕರಾದ ಶಿವರೆಡ್ಡಿ, ಈರಪ್ಪ, ಗವಿಸ್ವಾಮಿ ನಾಗಮ್ಮನವರ್, ಸಂತೋಷ ಹಾವನೂರು ಸೇರಿದಂತೆ ಗಂಗಾವತಿ ಮತ್ತು ಕುಷ್ಟಗಿ ಉಪ–ವಲಯ ಅರಣ್ಯಾಧಿಕಾರಿಗಳು, ಗಸ್ತು ಅರಣ್ಯ ಪಾಲಕರು ಹಾಗೂ ತೋಟಗಾರಿಕೆ ಮಹಾವಿದ್ಯಾಲಯದ ಆಡಳಿತ ಅಧಿಕಾರಿಗಳು/ಸಿಬ್ಬಂದಿ ವರ್ಗದರು, ವಿದ್ಯಾರ್ಥಿಗಳು ಹಾಗೂ ಇನ್ನಿತರೆ ಕಛೇರಿ ಸಿಬ್ಬಂದಿಯವರು ಹಾಜರಿದ್ದರು.

ಹಂಪಿ ಟೈಮ್ಸ್
ಕನ್ನಡ ದಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

ಬೆಳಕಿನ ಹಾದಿ

ಆಸೆಯೆಂಬ ಬಿಸಿಲು ಕುದುರೆ

■ ಆರ್.ಬಿ.ಗುರುಬಸವರಾಜ

ಒಂದೂರಿನಲ್ಲಿ ಸುರೇಶ ಮತ್ತು ಗೌರೀಶ ಎಂಬ ಇಬ್ಬರು ಸ್ನೇಹಿತರಿದ್ದರು. ಅದರಲ್ಲಿ ಸುರೇಶನ ಕಾಲು ಸರಿ ಇರಲಿಲ್ಲ. ಅದಕ್ಕಾಗಿ ಅವನು ಊರುಗೋಲು ಬಳಸುತ್ತಿದ್ದ. ದಿನವು ಇಬ್ಬರೂ ಜೊತೆಯಾಗಿ ಸುತ್ತಾಡುತ್ತಿದ್ದರು.

ಹೀಗೆ ಒಂದು ದಿನ ಸುತ್ತಾಡಲು ಹೊರಟಾಗ ಒಂದು ಕಡೆ ನೆಲದ ಮೇಲೆ ಬಿಳಿ ಬಣ್ಣದ ಬಾಕ್ಸ್ ಹಾಕಲಾಗಿತ್ತು. ಕೋವಿಡ್ ಬಂದಾಗ ಅಂತರ ಕಾಯ್ದುಕೊಳ್ಳಲು ಹಾಕಿರಬೇಕೆಂದು ಕೊಂಡರು. ಆದರೆ ಅಚಾನಕ್ಕಾಗಿ ಸುರೇಶನು ಆ ಬಾಕ್ಸ್‌ನಲ್ಲಿ ಕಾಲಿಟ್ಟನು. ಏನಾಶ್ಚರ್ಯ! ಕಾಲಿಟ್ಟ ಕೂಡಲೇ ಸುರೇಶನ ಕಾಲುಗಳು ಸರಿಯಾದವು. ಊರುಗೋಲು ಇಲ್ಲದೇ ನಡೆಯುವಂತಾದವು. ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಇಬ್ಬರಿಗೂ ಆಶ್ಚರ್ಯವಾಗಿತ್ತು. ಸ್ವಲ್ಪ ಹೊತ್ತು ಆ ಸ್ಥಳದ ಮಹಿಮೆಯ ಬಗ್ಗೆ ಬಿಟ್ಟ ಕಣ್ಣು ಮುಚ್ಚದಂತೆ ನೋಡುತ್ತಿದ್ದರು.

ಅವರಿಬ್ಬರು ಇದನ್ನು ಇನ್ನಷ್ಟು ಪರೀಕ್ಷಿಸಲು ಬಯಸಿದರು. ಸ್ವಲ್ಪ ಸಮಯ ಅಲ್ಲಿಯೇ ನಿಂತುಕೊಂಡರು. ಅಲ್ಲಿಗೆ ಇನ್ನಿಬ್ಬರು ಸ್ನೇಹಿತರು ಬಂದರು. ಅದರಲ್ಲಿ ಒಬ್ಬನಿಗೆ ಕಣ್ಣು ಕಾಣುತ್ತಿರಲಿಲ್ಲ. ಸ್ನೇಹಿತನ ಸಹಾಯದಿಂದ ನಡೆಯುತ್ತಿದ್ದ. ಕಣ್ಣು ಕಾಣದವನನ್ನು ಈ ಬಾಕ್ಸ್‌ಗೆ ಕರೆತರಲು ಕೇಳಿಕೊಂಡರು. ಅದರಂತೆ ಅವನನ್ನು ಬಾಕ್ಸ್‌ಗೆ ಕರೆತಂದರು. ಕೂಡಲೇ ಅವನ ಕಣ್ಣುಗಳು ಕಾಣತೊಡಗಿದವು. ಅವನು ಸಂತೋಷದಿಂದ ಕುಣಿದಾಡಿದನು ಮತ್ತು ಅಲ್ಲಿಂದ ಮನೆಕಡೆಗೆ ವೇಗವಾಗಿ ಓಡಿಹೋದನು.

ಇದೆಲ್ಲವನ್ನು ಗೌರೀಶನು ಕುತೂಹಲದಿಂದ ನೋಡುತ್ತಿದ್ದ. ಅವನ ತಲೆಯಲ್ಲಿ ಬೇರೆ ರೀತಿಯ ಆಲೋಚನೆ ಮೂಡತೊಡಗಿತ್ತು. ಸುರೇಶನು ಇತರೆ ವಿಕಲಾಂಗರನ್ನು ಹುಡುಕತೊಡಗಿದ. ನನ್ನಂತೆ ವಿಕಲಾಂಗರಾಗಿದ್ದ ಎಲ್ಲರೂ ಸರಿಯಾಗಬೇಕೆಂಬುದು ಅವನ ಆಸೆಯಾಗಿತ್ತು.

ಅಲ್ಲಿಗೆ ಮತ್ತೋರ್ವ ವ್ಯಕ್ತಿ ಬಂದ. ಅವನ ಒಂದು ಕೈ ಮುರಿದಿತ್ತು. ಅವನ ಕೈಯನ್ನು ಸರಿ ಮಾಡಬೇಕೆಂಬುದು ಸುರೇಶನ ಆಸೆಯಾಗಿತ್ತು. ಆದರೆ ಗೌರೀಶ ಅವನನ್ನು ತಡೆದನು. 'ನಾವು ಹೀಗೆ ಉಚಿತವಾಗಿ ಅವರ ಅಂಗವಿಕಲತೆಯನ್ನು ಸರಿ ಮಾಡುವ ಬದಲು ಒಂದಿಷ್ಟು ಹಣ ವಸೂಲಿ ಮಾಡದರೆ ಹೇಗೆ?' ಎಂಬುದು ಅವನ ಆಲೋಚನೆಯಾಗಿತ್ತು.

ಗೌರೀಶ ಕೈ ಮುರಿದ ವ್ಯಕ್ತಿ ಬಳಿ ಬಂದು ಆ ಸ್ಥಳದ ಮಹಿಮೆಯ ಬಗ್ಗೆ ಹೇಳತೊಡಗಿದ. ಅದಕ್ಕೆ ಹಣ ಕೊಡುವಂತೆ ಕೇಳಿದ. ಮೊದಮೊದಲು ಕೈಮುರಿದ ವ್ಯಕ್ತಿ ಅದಕ್ಕೆ ಒಪ್ಪಲಿಲ್ಲ. ನಿನ್ನ ಕೈ ಸರಿಯಾಗದಿದ್ದರೆ ನೀನು ಕೊಟ್ಟ ಹಣಕ್ಕೆ ಎರಡರಷ್ಟು ಕೊಡುವುದಾಗಿ ಗೌರೀಶ ಹೇಳಿದ. ಅವನ ಹೇಳಿಕೆಯಿಂದ ಕೈ ಮುರಿದ ವ್ಯಕ್ತಿಯಲ್ಲಿ ಆಶಾಭಾವನೆ ಮೂಡಿತು. ಅದಕ್ಕಾಗಿ ಗೌರೀಶ ಕೇಳಿದ ಹಣವನ್ನು ಕೊಡಲು ಒಪ್ಪಿದನು. ಅವನಿಂದ ಹಣ ಪಡೆದ ಗೌರೀಶ ಅವನನ್ನು ಬಾಕ್ಸ್‌ನಲ್ಲಿ ನಿಲ್ಲಿಸಿದ. ಆದರೆ ಮುರಿದ ಕೈ ಸರಿಯಾಗಲಿಲ್ಲ. ಗೌರೀಶನಿಗೆ ಅಚ್ಚರಿಯಾಯಿತು. ಒಂದು ಗಂಟೆಯ ಹಿಂದೆ ಕಣ್ಣು ಬಂದಿತ್ತು, ಕಾಲು ಸರಿಯಾಗಿತ್ತು. ಆದರೆ ಈಗ ಕೈ ಏಕೆ ಸರಿಯಾಗುತ್ತಿಲ್ಲ ಎಂಬುದು ಗೌರೀಶನ ಚಿಂತೆಯಾಯಿತು.

ಬಾಕ್ಸ್‌ನಲ್ಲಿ ಸರಿಯಾಗಿ ನಿಲ್ಲುವಂತೆ ತೋರಿಸಲು ಬಾಕ್ಸ್‌ನಲ್ಲಿ ನಿಂತ. ಅವನು ಬಾಕ್ಸ್‌ನಲ್ಲಿ ನಿಂತ ಕೂಡಲೇ ಅವನ ಒಂದು ಊನವಾಯಿತು. ಒಂದು ಕಣ್ಣು ಕಾಣದಂತಾಯಿತು. ಕೈಮುರಿದ ವ್ಯಕ್ತಿ ತನ್ನ ಹಣವನ್ನು ವಾಪಾಸು ಕೊಡುವಂತೆ ಕೇಳಿಕೊಂಡ. ಒಪ್ಪಂದದಂತೆ ಗೌರೀಶ ಎರಡುಪಟ್ಟು ಹಣ ನೀಡಲು ಮುಂದಾದ. ಆದರೆ ಆ ವ್ಯಕ್ತಿ ತಾನು ನೀಡಿದ ಹಣ ಮಾತ್ರ ಪಡೆದು ಅಲ್ಲಿಂದ ಮುಂದೆ ಹೋದ. ಇದೆಲ್ಲವನ್ನೂ ಸುಮ್ಮನೆ ನಿಂತು ನೋಡುತ್ತಿದ್ದ ಸುರೇಶ, 'ಇನ್ನೊಬ್ಬರ ಹಣಕ್ಕೆ ಆಸೆ ಪಟ್ಟರೆ ಹೀಗೇ ಆಗುತ್ತದೆ. ಒಬ್ಬರು ಬೆವರು ಸುರಿಸಿ ಗಳಿಸಿದ ಹಣವನ್ನು ಮತ್ತೊಬ್ಬರು ಆಸೆಪಡಬಾರದು' ಎಂದು ಹೇಳಿದನು. ಇದರಿಂದ ತನ್ನ ತಪ್ಪಿನ ಅರಿವಾದ ಗೌರೀಶ ಯಾರಿಗೂ ತೊಂದರೆಕೊಡದಂತೆ ಬಾಳಬೇಕೆಂದು ನಿರ್ಧರಿಸಿದ.

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಬೆಳಕಿನ ಹಾದಿ: ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಭಾಷಾ ಬೆಳವಣಿಗೆಗೆ ಕಾವ್ಯ ಕಲಿಕೆ

ನಾವು ಆಡುವ ಮಾತು ಮತ್ತು ಬರಹವನ್ನು ಭಾಷೆ ಎನ್ನುತ್ತೇವೆ. ಮಾನವ ಮತ್ತು ಬಾಷೆಯ ಸಂಬಂಧಗಳು ಅನನ್ಯವಾಗಿದೆ. ಭಾಷೆ ಮಾನವನ ಉಸಿರಿನಷ್ಟೆ ಸಹಜವಾಗಿದೆ. ಭಾಷೆ ದೇವರು ಕೊಟ್ಟ ವರ ಅಥವಾ ಪೂರ್ವಿಕರಿಂದ ವಂಶಿಕವಾಗಿ ಬಂದಿದೆ ಎಂಬ ವಾದವಿದೆ. ಆದರೆ ಮಾನವನ ಯೋಚನೆ, ಆಲೋಚನೆ, ಚಿಂತನೆಗಳು ವಿಕಾಸವಾದಂತೆ, ನಾಗರೀಕನಾದಂತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆದಂತೆ ಅದು ಬೆಳೆದಿದೆ ಎಂಬುದು ಒಪ್ಪುವಂತದ್ದು. ಭಾಷೆಯು ಅವಶ್ಯಕತೆಗೆ ಅನುಗುಣವಾಗಿ, ಪ್ರಯತ್ನ ಪೂರ್ವಕವಾಗಿ ಕಲಿಯುತ್ತಾ ಬೆಳೆಸಲಾಗಿದೆ. ಈ ಅಂಶಗಳ ಆಧಾರದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ.

ಪ್ರಸ್ತುತ ನಮ್ಮ ಶಾಲೆಗಳಲ್ಲಿ ಭಾಷಾ ಕಲಿಕೆಯನ್ನು ಗದ್ಯ ಮತ್ತು ಪದ್ಯಗಳನ್ನು ಬಳಸುತ್ತಾ ವ್ಯಾಕರಣದ ಜೊತೆ ಜೊತೆಯಾಗಿ ಕಲಿಕೆ ಮಾಡಲಾಗುತ್ತಿದೆ. ಮುಖ್ಯವಾಗಿ ಮಕ್ಕಳ ಕಲಿಕೆಯಲ್ಲಿ ಪದ್ಯದ ಮಹತ್ವ ಕುರಿತು ಅನೇಕರಿಗೆ ಸ್ಪಷ್ಟತೆ ಇಲ್ಲ. ಪದ್ಯವನ್ನು ಕೆಲವರು ಓದಿ ಅಥವಾ ಹಾಡಿ ಅದರ ಅರ್ಥ ಹೇಳಿದರೆ ಮುಗಿಯಿತು ಎಂದು ತಿಳಿದಿದ್ದಾರೆ. ಅಷ್ಟಕ್ಕೆ ಪದ್ಯ ಕಲಿಕೆ ಅಥವಾ ಬೋಧನಾ ಪ್ರಕ್ರಿಯೆ ನಿಂತು ಹೋದರೆ ಅದು ಮಕ್ಕಳ ಭಾಷಾ ಬೆಳವಣಿಯಲ್ಲಿ ಯಾವುದೇ ಕೊಡುಗೆಯನ್ನು ನೀಡುವುದಿಲ್ಲ. ಅದನ್ನು ಮೀರಿ ನಿಲ್ಲಬೇಕಾಗಿದೆ.

ಕಾವ್ಯ ಎಂದರೇ. . . . . .

ಕಾವ್ಯ ಮೂಲತಃ ಒಂದು ಅನುಭವ. ವಿಶೇಷವಾಗಿ ಕವಿಗೊದಗುವ ಲೋಕಾನುಭವ ಜನ್ಯವಾದ ಒಂದು ಅನುಭವ. ಅದು ಸಾಧಾರಣಕ್ಕಿಂತ ಬೇರೆಯಾದದ್ದು ಅಥವಾ ಬೇರೆ ಯಾಗುವಂಥ ಒಂದು ಸ್ಥಿತಿಗೆ ಏರಿದ್ದು. ಲೋಕದ ಅನುಭವವನ್ನು ಇದ್ದ ಹಾಗೆ ಹೇಳುವುದಾದರೆ ಅದು ಕಾವ್ಯವಾಗುವುದಿಲ್ಲ. ಅದು ವರದಿ ಅಥವಾ ವಾರ್ತೆಯಾಗುತ್ತದೆ.

ಯಾವುದೋ ಒಂದು ವಿಷಯವನ್ನು ಅತ್ಯಂತ ರಮ್ಯವಾಗಿ ನಿರೂಪಿಸುವುದೇ ಕಲೆ. ಹಾಗಾಗಿ ಕಾವ್ಯ ಒಂದು ಕಲೆ. ಸಾಮಾನ್ಯ ಅರ್ಥ ನೋಡುವುದಾದರೆ ಭಾಷೆಯ ಕಲಾತ್ಮಕವಾದ ಪರಮಸಿದ್ಧಿ ಬರವಣಿಗೆಯ ರೂಪವೇ ಕಾವ್ಯ. ಶಬ್ದ ಶರೀರದಲ್ಲಿ ಅರ್ಥ ಸತ್ವದ ಅತ್ಮಹೊಂದಿರುವಬರವಣಿಗೆ,ವಾಚ್ಯವಿದ್ದರೂಸೂಚ್ಯಾರ್ಥದಲ್ಲಿರುವ ಬರವಣಿಗೆ, ಬರೆಗಣ್ಣಿಗೆ ಕಂಡಿರುವುದನ್ನು ಒಳಗಣ್ಣಿನಿಂದ ನೋಡಿ ಬಣ್ಣಿಸುವುದು, ರಸಾತ್ಮಕವಾದ ಪದಪುಂಜಗಳ ಸಮೂಹ, ಕಣ್ಣಿಗೆ ಕಂಡಿದ್ದನ್ನು ಅತ್ಮದ ಅನಂದ ನೀಡುವಂತೆ ವರ್ಣಿಸುವುದೇ ಕಾವ್ಯ ಎನ್ನಲಾಗಿದೆ. ಈ ಕಾವ್ಯಗಳನ್ನು ರಚಿಸುವ ಸೃಜನಶೀಲ ವ್ಯಕ್ತಿಯಾದ ಕವಿ ಪರಿಸರದ ಕೂಸು. ಯಾವುದೇ ಕವಿಯಾದವನು ತನ್ನ ಕಾಲಕ್ಕೆ ಅಥವಾ ಸಮಾಜಕ್ಕೆ ಸ್ಪಂದಿಸಿ ಕಾವ್ಯವನ್ನು ರಚಿಸಿರುತ್ತಾನೆ.

ಕವಿಯು ತನ್ನ ಸುತ್ತಲಿನ ಪರಿಸರ – ಸಮಾಜ ಇವುಗಳಿಗೆ ಸಂಬಂಧಿಸಿದ ವಿಷಯ ವಸ್ತುವನ್ನು ವರ್ಣನಾತ್ಮಕವಾಗಿ ಚಿತ್ರಿಸಿರುತ್ತಾರೆ. ಕವಿತೆಯನ್ನು ಓದುವವರು ತನ್ನದೇ ಆದ ನೆಲೆಗಟ್ಟಿನಲ್ಲಿ ನಿಂತು ಅರ್ಥ ಮಾಡಿಕೊಳ್ಳುತ್ತಾರೆ. ಎರಡು ಮೂರು ಬಾರಿ ಒಂದು ಕವಿತೆಯನ್ನು ಓದಿದಾಗ ಬೇರೆ ಬೇರೆಯಾದ ಅಂದರೆವಿಭಿನ್ನರೀತಿಯಅರ್ಥವನ್ನುನಾವುಕಟ್ಟಿಕೊಳ್ಳಬಹುದಾಗಿದೆ. ಪದ್ಯವು ಅರ್ಥಗರ್ಭಿತ ಶಬ್ದಗಳಿಂದ ಕೂಡಿಕೊಂಡು, ಭಾವನೆಗಳಿಂದ, ಕಲ್ಪನೆಗಳಿಂದ, ಅನುಭವಗಳಿಂದ, ಮೌಲ್ಯಗಳಿಂದ ರೂಪುಗೊಂಡಿರುವ ಸಾಹಿತ್ಯದ ಒಂದು ಕೊಡುಗೆ.

ಪಠ್ಯ ಪುಸ್ತಕದಲ್ಲಿ ಪದ್ಯ ಯಾಕೆ. . . . . .

ತರಗತಿ ಪದ್ಯ ಸಾಹಿತ್ಯ ಎಂದಾಕ್ಷಣ ಅದು ಕೇವಲ ತರಗತಿಯ ಮಕ್ಕಳು ಮತ್ತು ಶಿಕ್ಷಕರ ನಡುವಿನ ಸಂವಹನ ಮಾತ್ರವಾಗಿರಲಾರದು. ವಿದ್ಯಾರ್ಥಿಗಳ ಕಲಿಕೆಯ ಅನುಕೂಲಿಸುವ ಪ್ರಕ್ರಿಯೆ ಕೇವಲ ಮಕ್ಕಳ ಭಾಷೆ ಕಲಿಕೆ ಮಾತ್ರ ಸೀಮಿತವಾಗಿಲ್ಲ. ಅದು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ಲಿಂಗಸೂಕ್ಷ್ಮತೆ, ಜಾತ್ಯಾತೀತತೆ, ಸಮಾನತೆ, ಸಮಾನ ಅವಕಾಶ, ಪರಸ್ಪರರಲ್ಲಿ ಗೌರವ ಇತ್ಯಾದಿ ಅಂಶಗಳನ್ನು ಆಧರಿಸಿ ಪಠ್ಯ ರಚನೆಗೆ ಕೆಲವು ಪ್ರಮುಖವಾದ ಅಂಶಗಳನ್ನು ಒಳಗೊಂಡಿರುತ್ತದೆ. ಈ ಎಲ್ಲ ಅಂಶಗಳನ್ನು ಆಧರಿಸಿ ಕಲಿಕೆಯಾದರೆ ಮಾತ್ರ ಔಪಚಾರಿಕ ಶಿಕ್ಷಣವು ಮಗುವಿನ ಭಾಷಾ ಕಲಿಕೆ ಭವಿಷ್ಯವನ್ನು ಭದ್ರವಾಗಿಸುತ್ತದೆ.

ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Hampi Times E-paper
SCAN AND READ

ಪದ್ಯಗಳು ಮಕ್ಕಳಲ್ಲಿ ಭಾಷೆಯ ಎಲ್ಲಾ ಕೌಶಲಗಳನ್ನು ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸುತ್ತವೆ. ಉನ್ನತ ಮಟ್ಟದ ಆಲೋಚನೆಯನ್ನು ಹೆಚ್ಚಿಸು ತ್ತವೆ. ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯ ವೃದ್ಧಿಗೆ ನೆರವಾಗುತ್ತವೆ. ಸೃಜನ ಶೀಲತೆ, ಸೌಂದರ್ಯ ಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ವರ್ಧನೆ, ಮನೋವೈಶಾಲ್ಯತೆ ವೃದ್ಧಿಗೆ ಪ್ರೇರಣೆ ನೀಡುತ್ತವೆ. ಆಲೋಚನೆ, ವಿಶ್ಲೇಷಣೆ, ಸಂಶ್ಲೇಷಣೆ, ತಾರ್ಕಿಕತೆ, ಕಲ್ಪನೆ, ಸೃಜನಶೀಲತೆ, ಊಹೆ, ನಿರ್ಧಾರ ತೆಗೆದುಕೊಳ್ಳುವ ಅಂಶಗಳನ್ನು ಬೆಳೆಸುತ್ತವೆ. ಮಕ್ಕಳಲ್ಲಿ ಭಾಷಾ ಅರ್ಥ ಗ್ರಹಣ ಸಾಮರ್ಥ್ಯ, ಆಸಕ್ತಿ, ಏಕಾಗ್ರತೆ, ಸ್ಪಷ್ಟ ಉಚ್ಚಾರ, ಸೂಕ್ತ ಸ್ವರಭಾರ, ಧ್ವನಿಯನ್ನು ಹಿತಮಿತ ಬಳಸುವಿಕೆಯನ್ನು ಕಲಿಸುವಲ್ಲಿ ಪದ್ಯಗಳ ಪಾತ್ರ ಹಿರಿದಾಗಿದೆ.

ಪ್ರಶ್ನಿಸುವ, ಸರಿತಪ್ಪುಗಳನ್ನು ವಿವೇಚಿಸುವ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸುವಲ್ಲಿ ಕಾವ್ಯಗಳ ಕೊಡುಗೆ ಇದೆ. ಕಾವ್ಯದಲ್ಲಿನ ಲಯಬದ್ಧ ರಚನೆಯಿಂದಾಗಿ ಹೊಸ ಪದಗಳನ್ನು ಕಲಿಯಲು ಮತ್ತು ನೆನಪಿಟ್ಟುಕೊಳ್ಳಲು ಸುಲಭವಾಗುತ್ತದೆ. ಮಹತ್ತರ ಅಶಯಗಳನ್ನು ಒಳಗೊಂಡ ಪದ್ಯ ತರಗತಿಗಳಲ್ಲಿ ನೀರಸವಾಗಿ ಕಲಿಕೆಯಾದರೆ ಅದರ ಆಶಯಕ್ಕೆ ದೊಡ್ಡ ಪೆಟ್ಟು ಬಿದ್ದಂತಾಗುತ್ತದೆ. ಇನ್ನಾದರೂ ತರಗತಿಗಳಲ್ಲಿ ಪದ್ಯ ಬೋಧನೆಗಿಂತ ಮುಂಚೆ ಕೆಲವು ಅಂಶಗಳನ್ನು ನಾವು ಪರಿಗಣಿಸಬೇಕಿದೆ.

ಕಲಿಕೆಯ ಮೊದಲ ಹಂತದಲ್ಲಿ ...

"ಭಾಷೆಯ ಮೇಲಿನ ಪ್ರೀತಿ ಕಾವ್ಯದೊಂದಿಗೆ ಬರುತ್ತದೆ" ಎಂದು ಹಿರಿಯರು ಹೇಳಿದ್ದಾರೆ. ಈ ಅಂಶದ ಅಧಾರದಲ್ಲಿ ಮಕ್ಕಳ ಶಾಲಾ ಪೂರ್ವ ಅಥವ ಆರಂಭದ ತರಗತಿಗಳಲ್ಲಿ ಕಲಿಕೆಯು ಚಿಕ್ಕ ಪ್ರಾಸ ಪದ್ಯಗಳಿಂದಲೇ ಆರಂಭವಾಗುತ್ತದೆ. ಅದರ ಮೂಲಕ ಮಗು ಅನೇಕ ಹೊಸ ಪರಿಕಲ್ಪನೆಗಳನ್ನು ಸರಳವಾಗಿ ಅರ್ಥ ಮಾಡಿಕೊಳ್ಳುತ್ತದೆ. ಪ್ರಾಣಿ, ಪಕ್ಷಿ, ಮರ, ಹೂ, ತರಕಾರಿ, ಬಣ್ಣ. . .ಇತ್ಯಾದಿಗಳ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಸುವಲ್ಲಿ ಪದ್ಯಗಳ ಪಾತ್ರ ಗಮನಾರ್ಹ.

ಈ ಪದ್ಯಗಳು ಮಕ್ಕಳಿಗೆ ಖುಷಿ ಕೊಡುವುದರ ಜೊತೆಗೆ, ನೆನಪಿಟ್ಟುಕೊಂಡು ಸದಾ ಗುನುಗುವಂತೆ ಮಾಡುತ್ತವೆ. ಈ ಪದ್ಯಗಳಲ್ಲಿನ ಸಣ್ಣ, ಉದ್ದ ಮತ್ತು ಲಯಬದ್ಧ ಸಾಲುಗಳು ಹೆಚ್ಚು ಗಮನ ಸೆಳೆಯುತ್ತವೆ. ಮಕ್ಕಳಿಗೆ ಶಬ್ದಗಳ ಉಚ್ಚಾರಣೆ ಕಲಿಯಲು, ಪ್ರಾಸಬದ್ಧ ಪದಗಳೊಂದಿಗೆ ಮೋಜು ಮಾಡಲು, ಹೊಸ ವಿಷಯಗಳನ್ನು ತಮಾಷೆಯ ರೀತಿಯಲ್ಲಿ ಕಲಿಯುವಂತೆ ಮಾಡುತ್ತವೆ. ಮಕ್ಕಳ ಭಾಷಾ ಬೆಳವಣಿಗೆ ಆರಂಭದ ದಿನಗಳನ್ನು ಆತ್ಮವಿಶ್ವಾಸದೊಂದಿಗೆ ಸಂತಸವಾಗಿಸುತ್ತವೆ.

ದೇಹದ ಅಂಗಗಳನ್ನು ಬಳಸಿಕೊಂಡು ಇದನ್ನು ಇನ್ನಷ್ಟು ವಿಸ್ತರಿಸುವ ಶಿಕ್ಷಕರು ನಮ್ಮಲ್ಲಿದ್ದಾರೆ. ಆ ಪದ್ಯಗಳಿಗೆ ಪೂರಕವಾಗಿ ಚಪ್ಪಾಳೆ ತಟ್ಟುವುದು, ಚಟಿಕೆ ಹೊಡೆಯುವುದು, ಕೈ-ಕಾಲುಗಳನ್ನು ತಿರುಗಿಸುವುದು, ಕುಣಿಸುವುದು, ಹಾರುವುದು ಮುಂತಾದ ದೈಹಿಕ ಚಲನೆಗಳು ಮಕ್ಕಳಿಗೆ ಪದಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಇವು ಮಾಡುತ್ತವೆ.

ಕವನಕ್ಕಿಂತ ಮೊದಲು ಕವಿ...

ಬಹಳಷ್ಟು ಕವಿಗಳು ಅವರ ಮನಸ್ಥಿತಿ, ಜೀವನ ಘಟನೆಗಳು, ಕುಟುಂಬ-ಸಂಬಂಧಗಳು ಮತ್ತು ಪ್ರಕೃತಿಯ ಬಗ್ಗೆ ಕವನಗಳನ್ನು ಬರೆಯುತ್ತಾರೆ. ಮೊದಲಿಗೆ ಕವಿಯ ಬಗ್ಗೆ ನಾವು ಎಷ್ಟು ಸಾಧ್ಯವೋ ಅಷ್ಟು ಮಾಹಿತಿ ಸಂಗ್ರಹಿಸಬೇಕು. ಅವರು ಜೀವಿಸಿದ ಕಾಲಘಟ್ಟ ಮತ್ತು ಸ್ಥಳ ಯಾವುದು?. ಕವಿತೆಯನ್ನು ಬರೆದ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವುದು ಅತೀ ಅಗತ್ಯ. ಅವರು ಬರೆದಿರುವ ಕೃತಿಗಳು ಅವರಿಗೆ ಸಂದ ಬಿರುದು ಮತ್ತು ಪ್ರಶಸ್ತ

ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
NEWS PAPER ADS
THE BEST ADVERTISING
PLATFORM TO BOOST
YOUR BUSINESS
Book Your Ads Now!
M:94486 33038

ಸಂಪುಟ:01 • ಸಂಚಿಕೆ:329 • ನೋಂದಣಿ ನಂ.:KARKAN27911 • ವಿಜಯನಗರ • 01.06.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:329 • Reg.No:KARKAN27911 • VIJAYANAGARA • 01.06.2024 • Saturday • Page:04 • Rs:2

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

ಆದಾಯಕ್ಕೆ ಆದ್ಯತೆ ಸೌಲಭ್ಯಕ್ಕೆ ತಾತ್ಸಾರ

ಹಂಪಿ ವಿರೂಪಾಕ್ಷನ ಅಂಗಳದಲ್ಲಿನ ದೇವರುಗಳ ದರ್ಶನಕ್ಕೂ ಅಡ್ಡಿ। ವಯೋವೃದ್ಧರಿಗೂ ತಪ್ಪದ ಸರದಿಸಾಲಿನ ದರ್ಶನ

ಕೋಟ್ಯಾಂತರ ರೂ. ಆದಾಯವಿದ್ದರೂ ನಿರಂತರ ಅನ್ನದಾಸೋಹಕ್ಕಿಲ್ಲ ಆಸಕ್ತಿ। ಅಧಿಕಾರವಿದ್ದವರಿಗೆ ರೆಡ್ ಕಾರ್ಪೆಟ್ !

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯ ಗತವೈಭವವನ್ನು ಕೇಳಿ, ನೋಡಿ ತಿಳಿಯಲು ಬರುವ ಪ್ರವಾಸಿಗರು ಮತ್ತು ದಕ್ಷಿಣಕಾಶಿ ಎಂದೇ ಕರೆಯಲ್ಪಡುವ ಧಾರ್ಮಿಕ ಪುಣ್ಯಕ್ಷೇತ್ರದ ಹಂಪಿವಿರೂಪಾಕ್ಷೇಶ್ವರ ದರ್ಶನ ಪಡೆಯಲು ನಿತ್ಯ ಸಹಸ್ರಾರು ಭಕ್ತರು ಆಗಮಿಸುತ್ತಿರುವುದು ದೇವಸ್ಥಾನದ ಖಾತೆಗೆ ಸಂಗ್ರಹಗೊಳ್ಳುತ್ತಿರುವ ಕೊಟ್ಯಾಂತರ ರೂಪಾಯಿ ಆದಾಯವೇ ಸಾಕ್ಷಿ. ಆದರೆ ಸರ್ಕಾರ ದೇವಸ್ಥಾನದಲ್ಲಿ ಭಕ್ತರಿಗೆ ದೇವರ ದರ್ಶನ, ಮಂಗಳಾರತಿ, ತೀರ್ಥಪ್ರಸಾದ, ಅನ್ನದಾಸೋಹ, ವಸತಿ ಮತ್ತು ಮೂಲಭೂತ ಸೌಲಭ್ಯಗಳು ಮತ್ತು ದೇವಾಲಯದ ಅಂಗಳದಲ್ಲಿನ ದೇವರುಗಳ ದರ್ಶನಭಾಗ್ಯ ಕಲ್ಪಿಸುವುದ ಕ್ಕಿಂತ ಆದಾಯ ಸಂಗ್ರಹಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಭಕ್ತರು ಹಾಗೂ ಪ್ರವಾಸಿಗರಲ್ಲಿ ಬೇಸರ ಮೂಡಿಸಿದೆ.

ಹಂಪಿ ವಿರೂಪಾಕ್ಷೇಶ್ವರಸ್ವಾಮಿಯ ದರ್ಶನಕ್ಕೂ ಮುನ್ನ ದೇವಸ್ಥಾನದ ಎರಡನೇ ಗೋಪುರದ ಅಕ್ಕಪಕ್ಕವಿರುವ ಗಣೇಶ ಮತ್ತು ಸುಬ್ರಹ್ಮಣ್ಯ ಮೂರ್ತಿಗಳಿಗೆ ಭಕ್ತರಿಗೆ ದರ್ಶನ ಭಾಗ್ಯ ಕಲ್ಪಿಸದೇ ಬಾಗಿಲಿಗೆ ಬೀಗ ಜಡಿಯಲಾಗಿದೆ. ಅಲ್ಲದೆ ಎರಡನೇ ಗೋಪುರ ಪ್ರವೇಶಿಸುತ್ತಿದ್ದಂತೆ ಈ ಮುಂಚಿನಿಂದಲೂ ದೇವಸ್ಥಾನದಲ್ಲಿ ವಿರೂಪಾಕ್ಷನ ದರ್ಶನ ಪಡೆದು ಆವರಣದಲ್ಲಿರುವ, ಸೂರ್ಯನಾರಾಯಣ, ಮುಕ್ತಿನರಸಿಂಹ, ತಾರಕೇಶ್ವರ, ಇಷ್ಟಾರ್ಥಕ ಲಿಂಗ, ನಂದಿಮಂಟಪ ದರ್ಶನ, ಚಂಡಿಕೇಶ್ವರ ದರ್ಶನ, ಪಂಪಾದೇವಿ ದರ್ಶನ, ಭುವನೇಶ್ವರಿದೇವಿ, ಗುಲಗುಂಜಿ ಮಾಧವ, ನವಗ್ರಹ, ಚಾಮುಂಡೇಶ್ವರಿ ದೇವಸ್ಥಾನ, ದುರ್ಗಾದೇವಿ, ಲಕ್ಷ್ಮೀವೆಂಕಟೇಶ್ವರನ ದರ್ಶನ ಮಾಡಿ, ಪಂಪಾ ವಿರೂಪಾಕ್ಷೇಶ್ವರ ದೇಗುಲದ ಪ್ರಾಂಗಣದಲ್ಲಿ ಕೂತು ಧ್ಯಾನಮಾಡಿ, ಮೇಲ್ಚಾವಣೆಯ ತಳಹದಿಯಲ್ಲಿ ಪಂಪಾ ಮಹಾತ್ಮೆಯನ್ನು ಸಾರುವ ಬಣ್ಣದ ಚಿತ್ರಗಳನ್ನು, ಶಿಲ್ಪಕಲೆಗಳನ್ನು ಕಣ್ತುಂಬಿಕೊಳ್ಳುತ್ತಿದ್ದರು. ದೇವಾಲಯದ ಪ್ರಾಂಗಾಣದಲ್ಲಿ ಅಡ್ಡಾದಿಡ್ಡಿಯಾಗಿ ಬ್ಯಾರಿಕೇಡ್‌ಗಳಿಟ್ಟಿರುವುದನ್ನು ಭಕ್ತರು ಪ್ರಶ್ನಿಸಿದರೆ ದೇವಸ್ಥಾನ ಆಡಳಿತ ಸಿಬ್ಬಂದಿ ಭಕ್ತರಿಗೆ ಸಮರ್ಪಕ ಉತ್ತರ ನೀಡದೇ, ಜಿಲ್ಲಾಡಳಿತದ ಕ್ರಮ ಮತ್ತು ಪುರಾತತ್ವ ಇಲಾಖೆಯ ನಿರ್ದೇಶನವೆಂದು ಬೊಟ್ಟು ತೋರಿಸಿ ಜಾರಿಕೊಳ್ಳುತ್ತಾರೆ. ಇಲ್ಲಿಯ ಅವ್ಯವಸ್ಥೆಗೆ ಯಾರಿಗೆ ದೂರಬೇಕು ಎಂಬ ಸಹಾಯವಾಣಿಗಳು ಸಹ ಇಲ್ಲಿಲ್ಲ. ದೇಗುಲಕ್ಕೆ ದೇಣಿಗೆ ಪಡೆಯಲು ಹಾಕುವ ಬೋರ್ಡ್ ದೊಡ್ಡದಾಗಿರುತ್ತದೆ. ಆದರೆ ಸಹಾಯವಾಣಿಗಳ ಮಾತ್ರ ಕಣ್ಣಿಗೆ ಕಾಣುವುದೇ ಇಲ್ಲ. ಬಹುದೂರಗಳಿಂದ ಬಹುಕಾಲದ ನಂತರ ಅಪರೂಪಕ್ಕೊಮ್ಮೆ ಬರುವ ಭಕ್ತರಿಗೂ ಇಲ್ಲಿನ ಕೆಲ ದೇವರ ದರ್ಶನದ ಭಾಗ್ಯದಿಂದ ವಂಚಿತರಾಗುತ್ತಿದ್ದಾರೆ.

ಮೇಲಾಧಿಕಾರಿಗಳ ಮೆಚ್ಚುಗೆ ಪಡೆಯಲು ದೇವಸ್ಥಾನದ ಅಧಿಕಾರಿಗಳಿಂದ ಕಾಲು ಸುಡದಂತೆ ರೆಡ್ ಕಾರ್ಪೆಟ್ ಹಾಸು ವ್ಯವಸ್ಥೆ.

ಅಧಿಕಾರಿಗಳು ತೆರಳಿದ ಬಳಿಕ ರೆಡ್ ಕಾರ್ಪೆಟ್ ಸುತ್ತಿಟ್ಟಿರುವುದು. ಜನಸಾಮಾನ್ಯರಿಗೆ ಬಿಸಿಲಿನ ತಾಪ ಕಾಲಿಗೆ ತಾಗುವುದಿಲ್ಲವೆ? ಎಂಬುದು ಭಕ್ತರ ಪ್ರಶ್ನೆ

ಇಲ್ಲಿ ತಲಾ 25 ರೂಗಳ ವಿಶೇಷ ದರ್ಶನ ಟಿಕೇಟ್ ಪಡೆದವರಿಗಷ್ಟೇ ಗರ್ಭಗುಡಿಯೊಳಗೆ ನೇರಪ್ರವೇಶ, ಮಂಗಳಾರತಿ ಮಾಡಿ ತೀರ್ಥ ನೀಡಲಾಗುತ್ತದೆ. ಸಾಮಾನ್ಯ ಭಕ್ತರಿಗೆ ತೀರ್ಥಕೊಡುವವರು ಇಲ್ಲ ಎಂಬುದು ಭಕ್ತರ ಆರೋಪ.

> ಹಂಪಿಗೆ ಬಂದ ಭಕ್ತರಿಗೆ, ಪ್ರವಾಸಿಗರಿಗೆ ದುಡ್ಡು ಕೊಟ್ಟರೂ ಆಹಾರ ಸಿಗುತ್ತಿಲ್ಲ. ದೇವಸ್ಥಾನದವತಿಯಿಂದ ಹಂಪಿಯಲ್ಲಿ ಮಧ್ಯಾಹ್ನ ಮತ್ತು ರಾತ್ರಿ ತಿರುಪತಿ ಮಾದರಿಯಂತೆ ಅನ್ನದಾಸೋಹ ಮಾಡಬೇಕು. ಬಯಲು ಆಲಯವಾಗಿರುವ ಹಂಪಿಯಲ್ಲಿ ನಡೆದು ನೋಡುವುದೇ ಹೆಚ್ಚಾಗಿರುತ್ತದೆ. ನೀರಿನ ದಾಹ, ಹಸಿವು ತಣಿಸಿಕೊಳ್ಳಲು ಪರದಾಡುತ್ತಿದ್ದಾರೆ. ಭಕ್ತರಿಗೆ ಅನ್ನಕೊಡುವ ದೇಗುಲಗಳಲ್ಲಿ ಭಕ್ತರ ಸಂಖ್ಯೆಯೂ ಹೆಚ್ಚು. ಅಂತಹ ದೇಗಲುಗಳೂ ಸದಾ ಸಮೃದ್ಧವಾಗಿವೆ ಎಂಬುದನ್ನು ಸರ್ಕಾರ ಅರಿತು ಅನ್ನದಾಸೋಹ ಆರಂಭಿಸಬೇಕು.
> – ಗೋಪಾಲ, ಮಾರ್ಗದರ್ಶಿ, ಹಂಪಿ

ಹಂಪಿಗೆ ಭೇಟಿ ನೀಡುವ ರಾಜ್ಯ ಹಾಗೂ ಕೇಂದ್ರದ ಹಿರಿಯ ಅಧಿಕಾರಿಗಳು, ರಾಜಕಾರಣಿಗಳಿಗೆ ದೇವಸ್ಥಾನದ ಆಡಳಿತಅಧಿಕಾರಿಗಳು ರೆಡ್ ಕಾರ್ಪೆಟ್ ಹಾಕಿ ಸ್ವಾಗತಿಸಿ ರಾಜಾತೀಥ್ಯ ಮಾಡುವುದನ್ನು ನೋಡಿದರೆ, ದೇವಸ್ಥಾನದಲ್ಲಿ ನಿತ್ಯವೂ ಸಾಮಾನ್ಯ ಭಕ್ತರಿಗೆ ಇದೇ ಮಾದರಿಯಲ್ಲಿ ಸೇವಾ ಸೌಲಭ್ಯಗಳು ದೊರೆಯುತ್ತವೆ ಎಂದು ಹಿರಿಯ ಅಧಿಕಾರಿಗಳು ಭಾವಿಸುವುದು ಸಹಜ.

ಆದರೆ ಇದು ಬರೀ ರಾಜಕಾರಣಿಗಳು, ಹಿರಿಯ ಅಧಿಕಾರಿಗಳ ವರ್ಗಕ್ಕೆ ಸೀಮಿತ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ದೇವಸ್ಥಾನದ ಗರ್ಭಗುಡಿಯ ಪ್ರವೇಶದ್ವಾರದಲ್ಲಿ ಮಂಗಳಾರತಿಗೆ ತಟ್ಟೆಗೆ ಭಕ್ತರು ಹಾಕುತ್ತಿದ್ದ ಹಣ ಹುಂಡಿಗೆ ಹಾಕಿಸಲಾಗುತ್ತಿದೆ. ಆದರೆ ಹುಂಡಿ ಇಟ್ಟಾಗಿನಿಂದಲೂ ದೇವರುಗಳಿಗೆ ಮಾಡುತ್ತಿದ್ದ ಅಲಂಕಾರಗಳು ಮೊದಲಿನಷ್ಟು ಕಾಣುತ್ತಿಲ್ಲ. ಹಣ ಸಂಗ್ರಹಕ್ಕಾಗಿ ಅಲ್ಲಲ್ಲಿ ಅಡ್ಡಾದಿಡ್ಡಿಯಾಗಿ ಹಣ ಸಂಗ್ರಹ ಹುಂಡಿ, ಟಿಕೇಟ್ ಕೌಂಟರ್ ತೆರೆದು ಗೋಪುರದ ನೈಜ ಸೌಂದರ್ಯವನ್ನೆ ಹಾಳುಗೆಡವಲಾಗುತ್ತಿದೆ. ಕೂಡಲೇ ಹಂಪಿಯ ಸೊಬಗಿಗೆ ಧಕ್ಕೆಯಾಗುತ್ತಿರುವ ದೇವಸ್ಥಾನದ ಪ್ರಾಂಗಾಣ ಪ್ರವೇಶಿಸದಂತೆ ಇಟ್ಟಿರುವ ಕಟ್ಟಿಗೆ ತಡೆಗೋಡೆ, ಟಿಕೇಟ್ ಕೌಂಟರ್ ತೆರವುಗೊಳಿಸಬೇಕು. ಕೋಟ್ಯಾಂತರ ಆದಾಯವಿರುವ ದೇವಸ್ಥಾನದಲ್ಲಿ ಧರ್ಮಸ್ಥಳ, ತಿರುಪತಿ ಮಾದರಿಯಂತೆ ಅನ್ನದಾಸೋಹ, ಮೂಲಭೂತ ಸೌಲಭ್ಯ ಕಲ್ಪಿಸಬೇಕು ಎಂದು ಭಕ್ತರು ಆಗ್ರಹಿಸಿದ್ದಾರೆ.

ದಡಾರಾ ರುಬೆಲ್ಲಾ ನಿರ್ಮೂಲನೆಗೆ ಶ್ರಮಿಸಿ

ಜಿಪಂ ಸಿಇಓ ಸದಾಶಿವ ಪ್ರಭು ಹೇಳಿಕೆ। ಅಂತರ ಇಲಾಖಾ ಸಮನ್ವಯ ಸಮಿತಿ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ದಡಾರಾ ಮತ್ತು ರುಬೆಲ್ಲಾ ಲಸಿಕಾ ಅಭಿಯಾನವು ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿ ಸಭಾಂಗಣದಲ್ಲಿ ಮೇ 30 ರಂದು ನಡೆದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ದಡಾರಾ ಮತ್ತು ರುಬೆಲ್ಲಾ 2024 ಡಿಸೆಂಬರ್‌ದೊಳಗೆ ನಿರ್ಮೂಲನೆಯಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕಾರ್ಯಕ್ರಮಗಳು ಶಿಸ್ತುಬದ್ಧವಾಗಿ ನಡೆಯಬೇಕು. ಮಗುವಿಗೆ 9 ತಿಂಗಳ ತುಂಬಿದ ನಂತರ ಮೊದಲನೇ ಡೋಸ್ ನೀಡಬೇಕು. ಆ ಬಳಿಕ ಒಂದೂವರೆ ವರ್ಷಕ್ಕೆ ಎರಡನೇ ಡೋಸ್ ನೀಡುವ ಕಾರ್ಯವು ಜಿಲ್ಲೆಯಲ್ಲಿ ಶೇ.100ರಷ್ಟು ಆಗಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಮಕ್ಕಳಿಗೆ ಲಸಿಕೆಯನ್ನು ಹಾಕಿಸಲು ಕೆಲವೊಮ್ಮೆ ಗ್ರಾಮೀಣ ಪ್ರದೇಶದ ಜನರು ಸಹಕರಿಸುವುದಿಲ್ಲ. ಆದ್ದರಿಂದ ದಡಾರ ಮತ್ತು ರುಬೆಲ್ಲಾ ಲಸಿಕೆಯ ಬಗ್ಗೆ ಜನರಿಗೆ ಸರಿಯಾದ ಮಾಹಿತಿ ನೀಡಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರ, ಮಹಿಳಾ ಸಂಘ-ಸಂಸ್ಥೆಗಳ, ಆಶಾ ಕಾರ್ಯಕರ್ತೆಯರ ಸಹಕಾರ ಪಡೆದುಕೊಂಡು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಸೂಚನೆ ನೀಡಿದರು. >>3

ತಂಬಾಕು ಸೇವನೆ ರೋಗಗಳಿಗೆ ರಹದಾರಿ

■ ಹಂಪಿ ಟೈಮ್ಸ್ ಕೂಡ್ಲಿಗಿ

ಪ್ರಸ್ತುತ ದಿನಗಳಲ್ಲಿ ಯುವ ಸಮುದಾಯವು ತಂಬಾಕು ಸೇವೆನೆಯ ವ್ಯಾಮೋಹಕ್ಕೆ ಬಿದ್ದು ಜೀವನವನ್ನೆ ಹಾಳು ಮಾಡಿ ಕೊಳ್ಳುತ್ತಿರುವುದು ವಿಷಾದನೀಯ ಸಂಗತಿ ಎಂದು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆರೋಗ್ಯಾಧಿಕಾರಿ ಡಾ. ಎಸ್.ಪಿ.ಪ್ರದೀಪ್ ಕುಮಾರ್ ಹೇಳಿದರು. ಪಟ್ಟಣದ ಜ್ಞಾನಭಾರತಿ ವಿದ್ಯಾಲಯದಲ್ಲಿ ಶುಕ್ರವಾರ ಕಾನೂನು ಸೇವೆಗಳ ಸಮಿತಿ, ತಾಲೂಕು ವಕೀಲರ ಸಂಘ, ವೈಎಸ್‌ಎಸ್ ಶಿಕ್ಷಣ ಸಮೂಹ ಸಂಸ್ಥೆ ಹಾಗೂ ಆರೋಹಣ ಸೊಸೈಟಿ ಫಾರ್ ಸೋಷಿಯಲ್ ಡೆವಲಪ್ಮೆಂಟ್ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ವಿಶ್ವ ತಂಬಾಕು ನಿಷೇಧ ದಿನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮೋಜು ಮಸ್ತಿಯ ನೆಪದಲ್ಲಿ ತಂಬಾಕು ಸೇವನೆಗೆ ಬಿದ್ದ ಯುವಕರು ನಂತರ ಅದಕ್ಕೆ ದಾಸರಾಗಿ ಚಟಕ್ಕೆ ಬಿದ್ದು ಇಡಿ ಜೀವನವನ್ನೆ ಹಾಳುಮಾಡಿಕೊಳ್ಳುತ್ತಿದ್ದಾರೆ. ತಂಬಾಕಿನಲ್ಲಿರುವ 100 ವಿಷಕಾರಕ ಹಾಗೂ 70 ಕ್ಯಾನ್ಸರ್‌ಕಾರಕ ರಾಸಾಯನಿಕಗಳು ಶ್ವಾಸಕೋಷದ ಕ್ಯಾನ್ಸರ್, ಅನ್ನನಾಳದ ಕ್ಯಾನ್ಸರ್, ನಾಲಗೆ, ಗಂಟಲಿನ ಕ್ಯಾನ್ಸರ್, ದೀರ್ಘಕಾಲದ ಕೆಮ್ಮು, ಶ್ವಾಸಕೋಶದ ಸೋಂಕು, ಹೀಗೆ ಹಲವಾರು ಗುಣಪಡಿಸಲಾಗದ ಭಯಂಕರ ರೋಗಗಳಿಗೆ ಕಾರಣವಾಗುತ್ತದೆ. ತಂಬಾಕು ಸೇವನೆಯು ಮನುಷ್ಯನ ಮೇಲೆ ಉಂಟುಮಾಡುವ ದುಷ್ಪರಿಣಾಮಗಳನ್ನು ಯುವ ಸಮುದಾಯಕ್ಕೆ ಮನಮುಟ್ಟುವಂತೆ ತಿಳಿಸಿ ಹೇಳಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ತಂಬಾಕು ಸೇವನೆಯಿಂದ ಯುವ ಪೀಳಿಗೆಯನ್ನು ರಕ್ಷಿಸುವುದು ಹೇಗೆ ಎಂಬ ಬಗ್ಗೆ ಯೋಜನೆಗಳನ್ನು ರೂಪಿಸುವುದರ ಜತೆಗೆ ಅವರಲ್ಲಿ ಈ ಬಗ್ಗೆ ಅರಿವು ಮೂಡಿಸಿ, ತಂಬಾಕು ನಿಯಂತ್ರಣದ ವಿಚಾರದಲ್ಲಿ ನೂತನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಮಾಜ ಒಟ್ಟಾಗಿ ಪಣ ತೊಡಬೇಕಾಗಿದೆ. ಒತ್ತಡ ಕಡಿಮೆ ಮಾಡಲು ಧೂಮಪಾನ ಸಹಕಾರಿ, ಧೂಮಪಾನವು ಸಂತೋಷ ಹೆಚ್ಚಿಸುತ್ತದೆ, ಧೈರ್ಯ ತುಂಬುತ್ತದೆ ಎಂಬೆಲ್ಲ ಹುಸಿ ಕಲ್ಪನೆಗಳು ಜನರಲ್ಲಿ ಮೂಡಿರುವುದು ದುರದೃಷ್ಟಕರ. ಬೀಡಿ, ಸಿಗರೇಟು, ಗುಟ್ಕಾ, ಜರ್ದಾ, ನಶ್ಯಾ, >>4

ಹಮ್ ದೋ ಹಮಾರ ಬಾರ ಬಿಡುಗಡೆ ತಡೆಗೆ ಆಗ್ರಹ

ಅಂಜುಮನ್ ಕಮಿಟಿಯಿಂದ ಜಿಲ್ಲಾಧಿಕಾರಿಗೆ ಮನವಿ। ಶಾಂತಿ ಕದಡುವ ಚಿತ್ರ ಬಿಡೆಗಡೆಯಾಗಬಾರದು ಎಂದ ಇಮಾಮ್ ನಿಯಾಜಿ

■ ಹಂಪಿ ಟೈಮ್ಸ್ ಹೊಸಪೇಟೆ

ಜೂ.7ರಂದು ದೇಶಾದ್ಯಂತಹ ಬಿಡುಗಡೆಯಾಗ ಲಿರುವ "ಹಮ್ ದೋ ಹಮಾರೆ ಬಾರಾ" ಎಂಬ ವಿವಾದಾತ್ಮಕ ಸಿನಿಮಾವನ್ನು ಬಿಡುಗಡೆ ಮಾಡದೇ ರದ್ದು ಮಾಡಲು ಒತ್ತಾಯಿಸಿ ಅಂಜುಮನ್ ಖಿದ್ಮತೆ ಇಸ್ಲಾಮ್ ಕಮಿಟಿಯ ಹಾಗು ಸಮಸ್ತ ಮುಸ್ಲಿಂ ಸಮುದಾಯದಿಂದ ಜಿಲ್ಲಾಧಿಕಾರಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು

ಅಂಜುಮನ್ ಖಿದ್ಮತೆ ಇಸ್ಲಾಮ್ ಕಮಿಟಿಯ ಅಧ್ಯಕ್ಷ ಹೆಚ್.ಎನ್.ಮೊಹಮ್ಮದ್ ಇಮಾಮ್ ನಿಯಾಜಿ ಮಾತನಾಡಿ, ಜೀ ಸಿನಿಮಾ ವಾಹಿನಿಯು ಇತ್ತೀಚೆಗೆ "ಹಮ್ ದೋ ಹಮಾರೆ ಬಾರಾ" ಎಂಬ ಚಲನಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದು, ಇದರಲ್ಲಿ ಅಲ್ಲಾಹುವಿನ ಪವಿತ್ರ ಗ್ರಂಥ ಖುರಾನ್ ಶರೀಫ್ ರಲ್ಲಿ ಇರುವ "ಸೂರೆ-ಎ-ಬಕರ" ಸಾಲಿನಲ್ಲಿನ ಉಪದೇಶಗಳನ್ನು ಹಾಗು ಸಂದೇಶಗಳನ್ನು ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕರು ತಪ್ಪಾಗಿ ಗ್ರಹಿಸಿ ಅಪಾರ್ಥ ಸೃಷ್ಟಿಸಿ ಪ್ರಚೋದನಾತ್ಮಕ ಹಾಗೂ ಅವಹೇಳನಕಾರಿಯಾಗಿ ಚಿತ್ರಿಸಿ ಸಮಾಜದಲ್ಲಿ ಧರ್ಮಗಳ ಮಧ್ಯೆ ಗೊಂದಲ ಉಂಟು ಮಾಡಿದ್ದಾರೆ.

ಯಾವುದೇ ಸಿನಿಮಾ ಒಂದು ಸಮುದಾಯವನ್ನು ಅವಹೇಳನ ಮಾಡಬಾರದು, ಸಿನಿಮಾ ಎಂದರೆ ಅದು ಮನರಂಜನೆ ಮಾತ್ರ, ಮನರಂಜನೆಯ ಮೂಲಕ ಉತ್ತಮ ಸಂದೇಶಗಳನ್ನು ನೀಡಬೇಕೆ ಹೊರತು ಕೆಟ್ಟ ಸಂದೇಶಗಳನ್ನಲ್ಲ, ಈ ಚಿತ್ರದ ಟ್ರೇಲರ್ ನೋಡಿದರೆ ಸಾಕು, >>3

ಮೈಕ್ರೋ ನ್ಯೂಸ್

ಋತುಚಕ್ರ ತಪ್ಪು ತಿಳುವಳಿಕೆ ಬೇಡ-ಟಿ. ಮಮತಾ

ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಋತುಚಕ್ರ ಒಂದು ಸಹಜ ಕ್ರಿಯೆ ಅದರ ಬಗ್ಗೆ ತಪ್ಪು ತಿಳುವಳಿಕೆ ಬೇಡ ಎಂದು ಹಂಪಸಾಗರ ಗ್ರಾ.ಪಂ. ಸದಸ್ಯೆ ಟಿ.ಮಮತಾ ಅಭಿಪ್ರಾಯ ವ್ಯಕ್ತಪಡಿಸಿದರು. ತಾಲೂಕಿನ ಆರೋಗ್ಯ ಕೇಂದ್ರದಲ್ಲಿ ಸಮುದಾಯ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ವಿಶ್ವ ಋತುಚಕ್ರ ನೈರ್ಮಲ್ಯ ದಿನ ಆಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕೆಲವರಲ್ಲಿ ಈ ಬಗ್ಗೆ ತಪ್ಪಾದ ಭಾವನೆ ಇದೆ. ಈ ತಪ್ಪು ಕಲ್ಪನೆ ಹೋಗಲಾಡಿಸಿ, ಇಲಾಖೆಯ ಸಹಯೋಗದೊಂದಿಗೆ ಜನಜಾಗೃತಿ ಮೂಡಿಸಲು ಮುಂದಾಗಿದ್ದಾರೆ ಎಂದರು. ಇದೇ ವೇಳೆ ಆಪ್ತ ಸಮಾಲೋಚಕರಾದ ಶಶಿಕಲಾ ಅವರು ಈ ಋತುಚಕ್ರ ಮತ್ತು ಅವಧಿಯ 5ದಿನ ಶುಚಿತ್ವದ ಬಗ್ಗೆ ತಿಳಿಹೇಳಿದರು. ಈ ಸಂದರ್ಭದಲ್ಲಿ ಸಮುದಾಯದ ಆರೋಗ್ಯ ಅಧಿಕಾರಿ ಕೃಷ್ಣ, ನಿರೀಕ್ಷಣಾಧಿಕಾರಿ ರಾಹತ್ ಸೇರಿದಂತೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿಗಳಿಂದ ಪೋಸ್ಟರ್ ಬಿಡುಗಡೆ

ಹಂಪಿ ಟೈಮ್ಸ್ ಕೊಪ್ಪಳ

ಕೃಷಿ ಇಲಾಖೆಯಿಂದ 2024-25 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ರೈತರ ಬೆಳೆವಿಮೆ ನೋಂದಾಯಿಸುವ ಬಗ್ಗೆ ಹಾಗೂ ಅಧಿಸೂಚಿತ ಬೆಳೆಗಳು ಹಾಗೂ ಬೆಳೆ ವಿಮೆ ಮೊತ್ತದ ಮಾಹಿತಿ ಇರುವ ಪೋಸ್ಟರ್‌ಗಳು ಹಾಗೂ ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರಗಳ ಬಳಕೆ ಕುರಿತ ಪೋಸ್ಟರ್‌ಗಳನ್ನು ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಬಿಡುಗಡೆಗೊಳಿಸಿದರು. ಈ ಸಂದರ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

ವೈ.ಎಂ.ವೀರಯ್ಯಸ್ವಾಮಿ ಇನ್ನಿಲ್ಲ



ಹೊಸಪೇಟೆ: ತಾಲೂಕಿನ 76 ವೆಂಕಟಾಪುರ ಗ್ರಾಮದಲ್ಲಿ ಊರಿನ ಮುಖಂಡ, ವೀರಶೈವ ಸಮಾಜದ ಹಿರಿಯರಾದ ವೈ.ಎಂ.ವೀರಯ್ಯ ಸ್ವಾಮಿ (85) ಅವರು ಅನಾರೋಗ್ಯದಿಂದಾಗಿ ಬಳ್ಳಾರಿ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಗಿನ ಜಾವ ನಿಧರಾಗಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಸ್ವಗ್ರಾಮದಲ್ಲಿ ಜರುಗಲಿದೆ. ಇವರಿಗೆ ಮೂವರು ಪುತ್ರಿಯರು, ಮೂವರು ಅಳಿಯಂದಿರು, ಮೂವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳು ಇದ್ದಾರೆ.

ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

01-06-2024 – ಶನಿವಾರ

ತಿಥಿ	: ನವಮಿ
ಪಕ್ಷ	: ಕೃಷ್ಣ
ನಕ್ಷತ್ರ	: ಉತ್ತರಭಾದ್ರಪದ
ಯೋಗ	: ಪ್ರೀತಿ
ಕರಣ	: ಗರಜ
ಸೂರ್ಯೋದಯ	: 05:42:09
ಸೂರ್ಯಾಸ್ತ	: 19:07:44
ರಾಹು	: 09:04–10:44
ಯಮಘಂಡ	: 14:06–15:46
ಗುಳಿಕ	: 05:42–07:23

ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 31-05-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1577.36 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	27 ಕ್ಯುಸೆಕ್
ಇಂದಿನ ಸಾಮರ್ಥ್ಯ	3.322 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ
ಕಳೆದ ವರ್ಷ ಇದೇ ದಿನ	
ಇಂದಿನ ಮಟ್ಟ	1580.5 ಅಡಿ
ಒಳ ಹರಿವು	1580 ಕ್ಯುಸೆಕ್
ಹೊರ ಹರಿವು	219 ಕ್ಯುಸೆಕ್
ಸಾಮರ್ಥ್ಯ	4.719 ಟಿಎಂಸಿ

ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿ

ಮೊದಲ ಪುಟದಿಂದ

ಹುಕ್ಕಾ... ಹೀಗೆ ಅನೇಕ ರೀತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಸೇವಿಸಲಾಗುತ್ತಿದೆ.

ತಂಬಾಕು ನಿಯಂತ್ರಣ ಕಾಯ್ದೆ ಹಾಗೂ ಅನೇಕ ಯೋಜನೆಗಳು ಜಾರಿಯಲ್ಲಿದ್ದರೂ, ತಂಬಾಕು ಸೇವನೆಯ ಪ್ರಮಾಣ ಕಡಿಮೆಯಾಗುತ್ತಿಲ್ಲ ಎಂಬುದು ಆತಂಕದ ವಿಚಾರ. ಸರ್ಕಾರ, ಸರ್ಕಾರೇತರ ಸಂಘ ಸಂಸ್ಥೆಗಳು, ಮನೋವೈದ್ಯರು, ಶಿಕ್ಷಣ ಸಂಸ್ಥೆಗಳು, ಆಪ್ತ ಸಮಾಲೋಚಕರು ಎಲ್ಲರೂ ಒಟ್ಟಾಗಿ ಶ್ರಮಿಸಿದರೆ ತಂಬಾಕು ಮುಕ್ತ ಗ್ರಾಮ, ನಗರ ಹಾಗೂ ಕುಟುಂಬ ನಿರ್ಮಾಣ ಅಸಾಧ್ಯವೇನಲ್ಲ ಎಂದು ತಿಳಿಸಿದರು.

ಪ್ಯಾನಲ್ ವಕೀಲ ಕರಿಬಸವರಾಜ ತಂಬಾಕು ನಿಷೇಧ ಹಾಗೂ ಅದರ ಪರಿಣಾಮಗಳ ಕುರಿತು ಮಾತನಾಡಿದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ಎಂ.ಮಲ್ಲಿಕಾರ್ಜುನಯ್ಯ, ಸಹಾಯಕ ಸರ್ಕಾರಿ ಅಭಿಯೋಜಕಿ ಶಿಲ್ಪ. ವೈ, ದಂತ ವೈದ್ಯೆ ಡಾ.ರಮ್ಯ, ವಕೀಲ ರವಿ ಅಂಗಡಿ, ಜ್ಞಾನಭಾರತಿ ಆಡಳಿತಾಧಿಕಾರಿ ಜಿ.ಆರ್.ರಾಜು, ಪ್ರಾಚಾರ್ಯ ಎಚ್.ಎಂ.ವಿಜಯಕುಮಾರ್, ಉಪನ್ಯಾಸಕ ಎನ್.ಬಸವರಾಜ, ಸಾರ್ವಜನಿಕ ಆಸ್ಪತ್ರೆಯ ಆಪ್ತ ಸಹಾಯಕರಾದ ಕೆ.ಪ್ರಶಾಂತ ಕುಮಾರ್, ಓಬಣ್ಣನಾಗರತ್ನ ಸೇರಿದಂತೆ ವಿಧ್ಯಾರ್ಥಿಗಳು ಭಾಗಿಯಾಗಿದ್ದರು.

ಸರ್ಕಾರಿ ಶಾಲೆಯಲ್ಲಿ ಎಲ್.ಕೆ.ಜಿ., ಯು.ಕೆ.ಜಿ. 1ನೇ ತರಗತಿ ಆರಂಭ

ಆಂಗ್ಲಮಾಧ್ಯಮ ಮಕ್ಕಳಿಗೆ ಅಕ್ಷರಭ್ಯಾಸ

ಎತ್ತಿನಬಂಡಿ ಮೆರವಣಿಗೆ ಮೂಲಕ ಮಕ್ಕಳನ್ನು ಸ್ವಾಗತಿಸಿದ ಶಿಕ್ಷಕರು

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಹೊಸಮಲಪನಗುಡಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆದೇಶದಂತೆ 2024–25ನೇ ಸಾಲಿನ ಶಾಲಾ ಪ್ರಾರಂಭೋತ್ಸವದಲ್ಲಿ ಸಂಭ್ರಮ ಸಡಗರಿಂದ ಮಕ್ಕಳನ್ನು ಬರಮಾಡಿಕೊಳ್ಳಲಾಯಿತು.

ಎಲ್.ಕೆ.ಜಿ., ಯು.ಕೆ.ಜಿ. ಮತ್ತು 1ನೇ ತರಗತಿಯ ಆಂಗ್ಲ ಮಾಧ್ಯಮ ಕಲಿಕೆಗೆ ನೋಂದಾಯಿಸಿಕೊಂಡ ಮಕ್ಕಳನ್ನು ಡೊಳ್ಳು ಕುಣಿತದೊಂದಿಗೆ ಎತ್ತಿನ ಬಂಡಿಯಲ್ಲಿ ಕರೆತಂದು ಮಕ್ಕಳಿಗೆ ಬಿಇಒ ಎಂ. ಚನ್ನಬಸಪ್ಪ ಅಕ್ಷರಭ್ಯಾಸ ಮಾಡಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ

ನೀಡಲಾಗುತ್ತದೆ. ಸರ್ಕಾರ ಮಕ್ಕಳಿಗೆ ಉಚಿತ ಶಿಕ್ಷಣ, ಪಠ್ಯಪುಸ್ತಕ, ಸಮವಸ್ತ್ರ, ಶೂ, ಬಿಸಿಯೂಟ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡುತ್ತಿದ್ದು, ಪಾಲಕ, ಪೋಷಕರು, ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ಸೌಲಭ್ಯಗಳ ಪ್ರಯೋಜನ ಪಡೆಯಬೇಕು. ಸರ್ಕಾರಿ ಶಾಲೆಯ ಶಿಕ್ಷಕರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಹೊಂದುವ ಮೂಲಕ ಶಿಕ್ಷಕರಾಗಿದ್ದಾರೆ. ಮಕ್ಕಳ ಕಲಿಕಾಸಕ್ತಿಯನ್ನು ಗುರುತಿಸಿ, ಮಕ್ಕಳನ್ನು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲೂ ಸಾಧನೆಗೈಯುವಂತೆ ತರಬೇತಿ ನೀಡುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದ ಮಕ್ಕಳು ಸರ್ವ ಕ್ಷೇತ್ರಗಳಲ್ಲೂ ಸಾಧನೆಗೈಯಲು ಬೇಕಾದ ಅರಿವು ಪಡೆಯುತ್ತಾರೆ ಎಂಬುದು ಪಾಲಕರು ಅರಿಯಬೇಕು. ತಾಲೂಕಿನ ಅನೇಕ ಶಾಲೆಗಳಲ್ಲಿ ಈಗಾಗಲೇ ಮಕ್ಕಳ ನೋಂದಣಿ ಕಾರ್ಯ ಆರಂಭಗೊಂಡಿದ್ದು ಪಾಲಕರು ಮಕ್ಕಳ ಹೆಸರನ್ನು ನೋಂದಾಯಿಸಬೇಕು ಎಂದರು.

ಶಾಲಾ ಮುಖ್ಯಗುರು ಹುಲುಗಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಎ.ಮಲ್ಲಿಕಾರ್ಜುನ, ಗ್ರಾಪಂ ಸದಸ್ಯರಾದ ಪ್ರಕಾಶ್, ಭೀಮಣ್ಣ, ಕ.ರಾ.ಪ್ರಾ.ಶಾ.ಶಿ.ಸಂಘದ ಉಪಾಧ್ಯಕ್ಷೆ ಸುಧಾದೇವಿ, ಸಂಚಾಲಕರಾದ ಗುರುಬಸವರಾಜ್, ಎಸ್‌ಡಿಎಂಸಿ ಸದಸ್ಯರಾದ ಕೋಟೆಪ್ಪ, ಮಲ್ಲಿಕಾರ್ಜುನ, ಮುಖಂಡರಾದ ನಾರಾಯಣಪ್ಪ, ಸಣ್ಣ ಮಾರೆಪ್ಪ, ಶಾಲೆಹ ಸಹಶಿಕ್ಷಕರು ಇದ್ದರು.

ಮತ ಎಣಿಕೆಗೆ ಜಿಲ್ಲಾಡಳಿತ ಸಕಲ ಸಜ್ಜು

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ। ಲೋಕಸಭೆ ಸಾರ್ವತ್ರಿಕ ಚುನಾವಣೆ–2024

■ ಹಂಪಿ ಟೈಮ್ಸ್ ಬಳ್ಳಾರಿ

ಲೋಕಸಭೆ ಸಾರ್ವತ್ರಿಕ ಚುನಾವಣೆ ಸಂಬಂಧ ಬಳ್ಳಾರಿ (ವಿಜಯನಗರ ಜಿಲ್ಲೆ ಒಳಗೊಂಡಂತೆ) ಜಿಲ್ಲೆಯ ಲೋಕಸಭೆ ಕ್ಷೇತ್ರ ವ್ಯಾಪ್ತಿಯ 08 ಕ್ಷೇತ್ರಗಳ ಮತ ಎಣಿಕೆ ಕಾರ್ಯ ಜೂನ್ 04 ರಂದು ನಗರದ ರಾವ್ ಬಹದ್ದೂರ್ ವೈ.ಮಹಾಬಲೇಶ್ವರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆಯಲಿದೆ. ಇದಕ್ಕೆ ಜಿಲ್ಲಾಡಳಿತವು ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಲೋಕಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ಕುರಿತಂತೆ ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಜೂ.04 ರಂದು ಬೆಳಿಗ್ಗೆ 08 ಗಂಟೆಯಿಂದ ಮತಗಳ ಎಣಿಕೆ ಕಾರ್ಯ ಪ್ರಾರಂಭವಾಗಲಿದೆ. ಮತ ಎಣಿಕೆ ಕೇಂದ್ರದ ಕಟ್ಟಡದಲ್ಲಿ 20 ಇವಿಎಂ ಸ್ಟ್ರಾಂಗ್ ರೂಂ ಮತ್ತು 02 ಅಂಚೆ ಮತಗಳ ಸ್ಟ್ರಾಂಗ್ ರೂಂಗಳಿದ್ದು, ಮತ ಎಣಿಕೆ ಕಾರ್ಯ ಒಟ್ಟು 08 ಹಾಲ್‌ಗಳಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಮತ ಎಣಿಕೆ ಕಾರ್ಯವನ್ನು ಸುಗಮವಾಗಿ ಕೈಗೊಳ್ಳಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 14 ಟೇಬಲ್‌ಗಳನ್ನು ಸಜ್ಜುಗೊಳಿಸಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬರು ಎಣಿಕಾ ಮೇಲ್ವಿಚಾರಕರು, ಒಬ್ಬರು ಎಣಿಕಾ ಸಹಾಯಕರು, ಒಬ್ಬರು ಮೈಕ್ರೋ ಅಬ್ಸರ್ವರ್ಸ್‌ಗಳನ್ನು ನಿಯೋಜಿಸಲಾಗಿದೆ. ಬಳ್ಳಾರಿ ಜಿಲ್ಲೆಗೆ ಒಟ್ಟು 112 ಟೇಬಲ್‌ಗಳಂತೆ, 150 ಎಣಿಕಾ ಮೇಲ್ವಿಚಾರಕರು, 159 ಎಣಿಕಾ ಸಹಾಯಕರು ಮತ್ತು 146 ಎಣಿಕಾ ಮೈಕ್ರೋ ಅಬ್ಸರ್ವರ್ಸ್‌ಗಳನ್ನು ನೇಮಕ ಮಾಡಲಾಗಿದೆ. ಮತ ಎಣಿಕೆ ಅಧಿಕಾರಿಗಳು, ಸಹಾಯಕರಿಗೆ ಈಗಾಗಲೇ ಒಂದು ಹಂತದ ತರಬೇತಿ ನೀಡಲಾಗಿದ್ದು, ಎರಡನೆ ಹಂತದ ತರಬೇತಿಯನ್ನೂ ನೀಡಲಾಗುವುದು. 121 ಜನರಿಗೆ ಈಗಾಗಲೆ ಕೌಂಟಿಂಗ್ ಏಜೆಂಟ್ ಆಗಿ ವೀಕ್ಷಣೆಗೆ ಪಾಸ್ ನೀಡಲಾಗಿದೆ ಎಂದರು.

88–ಹಡಗಲಿ ಕ್ಷೇತ್ರದಲ್ಲಿ ಒಟ್ಟು 218 ಮತಗಟ್ಟೆಗಳಿದ್ದು, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ 16 ಸುತ್ತು ಮತ ಎಣಿಕೆ ನಡೆಯಲಿದೆ. 89–ಹಗರಿಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಒಟ್ಟು 254 ಮತಗಟ್ಟೆಗಳಿದ್ದು, 19 ಸುತ್ತು ಮತ ಎಣಿಕೆ ನಡೆಯಲಿದೆ. 90–ವಿಜಯನಗರ ಕ್ಷೇತ್ರದಲ್ಲಿ ಒಟ್ಟು 259 ಮತಗಟ್ಟೆಗಳಿದ್ದು, ಕ್ಷೇತ್ರಕ್ಕೆ ಸಂಬಂಧಿಸಿದಂತೆ 19 ಸುತ್ತು ಮತ ಎಣಿಕೆ ನಡೆಯಲಿದೆ.

91–ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 242 ಮತಗಟ್ಟೆಗಳಿದ್ದು, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು 18 ಸುತ್ತು ಮತ ಎಣಿಕೆ ನಡೆಯಲಿದೆ. 93–ಬಳ್ಳಾರಿ ಗ್ರಾಮೀಣ ಕ್ಷೇತ್ರದಲ್ಲಿ 235 ಮತಗಟ್ಟೆಗಳಿದ್ದು, 17 ಸುತ್ತು. 94–ಬಳ್ಳಾರಿ ನಗರ ಕ್ಷೇತ್ರದಲ್ಲಿ 261 ಮತಗಟ್ಟೆಗಳಿದ್ದು, 19 ಸುತ್ತು. 95–ಸಂಡೂರು ಕ್ಷೇತ್ರದಲ್ಲಿ ಒಟು 253 ಮತಗಟ್ಟೆಗಳಿದ್ದು, 19 ಸುತ್ತು ಹಾಗೂ 96–ಕೂಡ್ಲಿಗಿ ಕ್ಷೇತ್ರದಲ್ಲಿ 250 ಮತಗಟ್ಟೆಗಳಿದ್ದು, ಒಟ್ಟು 18 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದೆ.

ನಗರದ ರಾವ್ ಬಹದ್ದೂರ್ ವೈ. ಮಹಾಬಲೇಶ್ವರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮತ ಎಣಿಕೆಗೆ ಸಕಲ ವ್ಯವಸ್ಥೆ ಕೈಗೊಳ್ಳಲಾಗಿದೆ. ಪ್ರತಿ ಹಂತದ ಮತ ಎಣಿಕೆ ವಿವರವನ್ನು ಮಾಧ್ಯಮಗಳ ಮೂಲಕ ಪ್ರಚುರಪಡಿಸಲು

ಅನುವಾಗುವಂತೆ ಮಾಧ್ಯಮದವರಿಗೆ ಮತ ಎಣಿಕೆ ಕೇಂದ್ರದಲ್ಲಿ ಮಾಧ್ಯಮ ಕೇಂದ್ರವನ್ನು ತೆರೆಯಲಾಗುವುದು ಎಂದರು.

ಮತ ಎಣಿಕೆ ಕೇಂದ್ರ ಸುತ್ತಲೂ 100 ಮೀಟರ್ ಪ್ರದೇಶ ಆವರಣದಲ್ಲಿ ವಾಹನಗಳ ಪ್ರವೇಶವಿರುವುದಿಲ್ಲ. ಮತ ಎಣಿಕೆ ಅಂಗವಾಗಿ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಮದ್ಯಮಾರಾಟ ನಿಷೇಧಿಸಲಾಗಿದೆ ಎಂದು ಹೇಳಿದರು.

ಪೊಲೀಸ್ ಅಧಿಕಾರಿ, ಸಿಬ್ಬಂದಿ ನಿಯೋಜನೆ: ಜಿಲ್ಲೆಯ 8 ಕ್ಷೇತ್ರಗಳ ಮತ ಎಣಿಕೆ ಕೇಂದ್ರವಾದ ರಾವ್ ಬಹದ್ದೂರ್ ವೈ.ಮಹಾಬಲೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಸುತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಅದರಲ್ಲಿ 01–ಎಸ್‌ಪಿ, 02–ಎಎಸ್ಪಿ, 05–ಡಿವೈಎಸ್ಪಿ, 15–ಸಿಪಿಐ, 25–ಪಿಎಸ್‌ಐ, 40–ಎಎಸ್‌ಐ, 250–ಪಿಸಿ, 04–ಕೆಎಸ್‌ಆರ್‌ಪಿ, 04 ಡಿ.ಆರ್ ತಂಡ ಸಹಿತ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಪಿ.ರವಿಕುಮಾರ್ ಅವರು ತಿಳಿಸಿದರು.

ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯ ಸಿಬ್ಬಂದಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಹಂಪಿಯ ಪರಿಸರದಲ್ಲಿ ಪ್ರಾಗೈತಿಹಾಸಿಕ ಕಾಲದ ಗವಿವರ್ಣ ಚಿತ್ರಗಳು ಪತ್ತೆ

■ ಹಂಪಿ ಟೈಮ್ಸ್ ಕೊಪ್ಪಳ

ಹಂಪಿ ವಿಶ್ವ ಪರಂಪರೆ ಪ್ರದೇಶದಲ್ಲಿರುವ ಜಿಲ್ಲೆಯ ಗಂಗಾವತಿ ತಾಲೂಕಿನ ಹನುಮನಹಳ್ಳಿ ಗ್ರಾಮದಲ್ಲಿ ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಪರಂಪರೆ ಇಲಾಖೆ ಕಮಲಾಪುರ–ಹಂಪಿಯ ಉಪ ನಿರ್ದೇಶಕರಾದ ಡಾ.ಆರ್.ಶೇಜೇಶ್ವರ ಹಾಗೂ ಪುರಾತತ್ವ ಸಹಾಯಕರಾದ ಡಾ.ಆರ್. ಮಂಜನಾಯ್ಕ ಇವರುಗಳು ಕ್ಷೇತ್ರ ಕಾರ್ಯ ಕೈಗೊಂಡಾಗ ಆನೆಗೊಂದಿಯ ಹತ್ತಿರದ ಪಂಪ ಸರೋವರಕ್ಕೆ ಹೋಗುವ ದಾರಿಯ ಎಡಬದಿಯ ಗುಡ್ಡದಲ್ಲಿರುವ ಬಂಡೆಯಲ್ಲಿ ಗವಿವರ್ಣ ಚಿತ್ರಗಳು ಪತ್ತೆಯಾಗಿವೆ.

ಇವುಗಳು ಕಿತ್ತಳೆ ಕೆಂಪು ವರ್ಣದಿಂದ ಮೂಡಿಸಿದ ಚಿತ್ರಗಳಾಗಿದ್ದು, ನಿಂತಿರುವ ಗೂಳಿಯು ಡುಬ್ಬದಿಂದ ಕೂಡಿದ್ದು, ಈ ಗೂಳಿಯ ಕಾಲುಗಳನ್ನು ಹುಲಿಯು ಹಿಡಿದಿರುವಂತೆ ಚಿತ್ರಿಸಲಾಗಿದ್ದು, ಹುಲಿಯು ದಷ್ಟ ಪುಷ್ಟವಾಗಿದ್ದು ಪಟ್ಟೆಗಳಿಂದ ಕೂಡಿದೆ. ಹುಲಿಯು 50 ಸೆಂ.ಮೀ ಉದ್ದ ಹಾಗೂ 20 ಸೆಂ.ಮೀ ಅಗಲವಾಗಿದೆ ಹಾಗೂ ಗೂಳಿಯು 40.ಸೆಂ.ಮೀ ಉದ್ದ ಹಾಗೂ 20 ಸೆಂ.ಮೀ ಅಗಲವಾಗಿದೆ. ಇನ್ನೆರಡು ಚಿಕ್ಕ ಚಿಕ್ಕ ಗೂಳಿಗಳ ಅಸ್ಪಷ್ಟ ಚಿತ್ರಗಳು ಗೋಚರಿಸುತ್ತವೆ. ಈ ಚಿತ್ರಗಳ ಅಕ್ಕಪಕ್ಕದಲ್ಲಿ ಅಸ್ಪಷ್ಟ ಕಿತ್ತಳೆ ಕೆಂಪು ವರ್ಣದಿಂದ ಮೂಡಿಸಿದ ಇತರ ಚಿತ್ರಗಳು ಸಹ ಕಂಡುಬರುತ್ತವೆ. ಈ ಗವಿ ವರ್ಣ ಚಿತ್ರಗಳು ನೈಸರ್ಗಿಕವಾಗಿ ಎರಡು ಬಂಡೆಗಳಿರುವ ಒಂದು ಬೃಹದಾಕಾರದ ಬಂಡೆಯು ಸಣ್ಣ ಪ್ರಮಾಣದ ಬಂಡೆಯ ಮೇಲೆ ವಾಲಿ ನಿಂತಿದ್ದು ಇದರಲ್ಲಿ ವರ್ಣ ಚಿತ್ರ ಮೂಡಿರುವ ಸಣ್ಣ ಬಂಡೆಗೆ ರಕ್ಷಣೆಯಂತಿದೆ. ಇದನ್ನು ಬಳಸಿಕೊಂಡು ವರ್ಣ ಚಿತ್ರಕ್ಕೆ ನೈಸರ್ಗಿಕವಾಗಿ ಮಳೆ ಗಾಳಿ ಬಿಸಿಲು ಮುಂತಾದ ನೈಸರ್ಗಿಕ ವಿಕೋಪಕ್ಕೆ ಹಾಳಾಗದೆ ಇರುವ ಜಾಗವನ್ನು ಆಯ್ಕೆ ಮಾಡಿಕೊಂಡಿರುವುದು

ಗವಿ ವರ್ಣ ಚಿತ್ರಗಳನ್ನು ಚಿತ್ರಿಸಿರುವುದು ಚಿತ್ರಕಾರನ ಕೌಶ್ಯಲತೆಯನ್ನು ಸೂಚಿಸುತ್ತದೆ.

ಇವುಗಳು ಪ್ರಾಗೈತಿಹಾಸ ಕಾಲದ ಗವಿವರ್ಣ ಚಿತ್ರಗಳಾಗಿದ್ದು, ಇವುಗಳು ಸುಮಾರು 2500 ವರ್ಷಗಳ ಪುರಾತನ ವರ್ಣ ಚಿತ್ರಗಳೆಂದು ಹೇಳಬಹುದಾಗಿದೆ. ಗವಿ ವರ್ಣಚಿತ್ರಗಳ ಶೋಧನೆಯಲ್ಲಿ ಸಹಕರಿಸಿದ ಸಿಬ್ಬಂದಿ ವೆಂಕಟೇಶ ಇವರಿಗೆ ಡಾ.ಆರ್.ಶೇಜೇಶ್ವರ ಇವರು ಧನ್ಯವಾದಗಳನ್ನು ತಿಳಿಸಿದ್ದಾರೆ ಎಂದು ಕಮಲಾಪುರ–ಹಂಪಿಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ವಿಜ್ಞಾನ

ಎಲ್ಲಾ ಸಾಗರಗಳು ಏಕೆ ಹೆಪ್ಪುಗಟ್ಟುವುದಿಲ್ಲ?

■ ಆರ್.ಬಿ.ಗುರುಬಸವರಾಜ

ತಿಮ್ಮ ತರಲೆ ಪ್ರಶ್ನೆಗೆ ಪ್ರಸಿದ್ದನಾದವನು. ಪ್ರಶ್ನೆ ಕೇಳೋದು ಅಂದ್ರೆ ಅವನಿಗೆ ತುಂಬಾ ಇಷ್ಟ. ಈ ಬಾರಿ ತಿಮ್ಮನ ಗಮನ ಸಾಗರಗಳ ಮೇಲೆ ಹೋಯಿತು ಎನ್ನಬಹುದು. 'ಸರ್, ಕೆಲವು ಸಾಗರಗಳ ನೀರು ಮಾತ್ರ ಹೆಪ್ಪುಗಟ್ಟುತ್ತದೆ. ಆದರೆ ಎಲ್ಲಾ ಸಾಗರಗಳ ನೀರು ಯಾಕೆ ಹೆಪ್ಪುಗಟ್ಟುವುದಿಲ್ಲ' ಎಂದ. ಅದಕ್ಕೆ ಕೂಡಲೇ ಸಾವರಿಸಿಕೊಂಡ ಶಿಕ್ಷಕರು ಅವನ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ.

ನೀರು ಹೆಪ್ಪುಗಟ್ಟಲು ಕೆಲವು ಕಾರಣಗಳಿವೆ. ನೀರು ಘನೀಭವನ ಬಿಂದುವನ್ನು ಹೊಂದಿದೆ. ನೀರಿನ ಘನೀಭವನ ಬಿಂದು 0 ಲಿ ಅ (32 ಲಿ ಈ). ಇದಕ್ಕಿಂತ ಕಡಿಮೆ ತಾಪಮಾನದಲ್ಲಿ ಮಾತ್ರ ನೀರು ಹೆಪ್ಪುಗಟ್ಟಿ ಮಂಜುಗಡ್ಡೆಯಾಗುತ್ತದೆ. ಸಮುದ್ರದ ನೀರು ಹೆಪ್ಪುಗಟ್ಟಿ ಮಂಜುಗಡ್ಡೆಯಾಗಲು 0 ಲಿ ಅ (32 ಲಿ ಈ) ಗಿಂತ ತಂಪಾಗಿರಬೇಕು. ಆಗ ಮಾತ್ರ ಸಮುದ್ರದ ನೀರು ಹೆಪ್ಪುಗಟ್ಟುತ್ತದೆ. ಆದರೆ ವಾಸ್ತವವಾಗಿ ಸಮುದ್ರದ ನೀರು –2 ಲಿ ಅ (28 ಲಿ ಈ) ನಲ್ಲಿ ಹೆಪ್ಪುಗಟ್ಟುತ್ತದೆ. ಸಾಗರಗಳು ನೀರು ಹೆಪ್ಪು ಗಟ್ಟದಿರಲು ಇನ್ನೊಂದು ಕಾರಣವೇನೆಂದರೆ ಅವುಗಳ ಪ್ರವಾಹಗಳು, ಅಲೆಗಳು ಮತ್ತು ಉಬ್ಬರವಿಳಿತಗಳು. ಸಾಗರಗಳು ಆಂತರಿಕ ಚಲನೆಯಿಂದ ನಿರಂತರವಾಗಿ ಚಲನೆಯಲ್ಲಿರುತ್ತವೆ. ಜೊತೆಗೆ ಬಿಸಿಯಾದ ಮತ್ತು ತಂಪಾದ ನೀರಿನ ಮಿಶ್ರಣದಿಂದ ಕೂಡಿರುತ್ತವೆ. ಈ ಚಲನೆಯು ಮಂಜುಗಡ್ಡೆ ರೂಪುಗೊಳ್ಳಲು ಸಹಕರಿಸುವುದಿಲ್ಲ.

ಸಾಗರಗಳ ನೀರು ಹೆಪ್ಪುಗಟ್ಟದಿರ